**ಸಂಪಾದಕ ಸಮಿತಿ**

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಸುಬ್ರಹ್ಮಣ್ಯಂ. ಬಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಕೆ.ಸಿ. ನಟರಾಜನ್ | ಸಂಪಾದಕ |


# ಬೃಹಚ್ಚರಣ

**ಸಂಘದ ಸದಸ್ಯರಾಗಿ**

| | |
|---|---|
| ಮಹಾ ಪೋಷಕರು | – 25,000/- |
| ಪೋಷಕರು | – 5,000/- |
| ಸದಸ್ಯತ್ವ | – 1,000/- |
| ವಾರ್ಷಿಕ ನಿರ್ವಹಣೆ | – 250/- |


ಸಂಪುಟ : 4 ಸಂಚಿಕೆ : 4 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಅಕ್ಟೋಬರ್–ಡಿಸೆಂಬರ್ 2014




## ಅರ್ಪಣೆ

**ಈ ಸಂಚಿಕೆಯನ್ನು ನಮ್ಮ ಸಮುದಾಯದ ಹಿತೈಷಿಗಳಾದ ವೇದಬ್ರಹ್ಮ**

**ಶ್ರೀ ಶಾಮಣ್ಣ ದೀಕ್ಷಿತ್**

**ಅವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಲಾಗಿದೆ**

## ಕಲ್ಯಾಣೋತ್ಸವ ವಿಶೇಷಾಂಕ

**ಮಕರ ಸಂಕ್ರಾಂತಿ ಹಾಗೂ ಮಹಾ ಶಿವರಾತ್ರಿಯ ಶುಭಾಶಯಗಳು**

## ಅಧ್ಯಕ್ಷರ ನುಡಿ

*ಆತ್ಮೀಯ ಬಂಧುಗಳೇ, ನಮಸ್ಕಾರ.*

ಹೊಸವರ್ಷ 2015, ಮಕರ ಸಂಕ್ರಾಂತಿಹಬ್ಬ, ಗಣರಾಜ್ಯೋತ್ಸವ, ಮಹಾಶಿವರಾತ್ರಿಗೆ ಸಂಘದ ಎಲ್ಲಾ ಸದಸ್ಯರಿಗೂ ಹಾಗೂ ಕುಟುಂಬದವರಿಗೂ ಕಾರ್ಯಕಾರಿ ಸಮಿತಿ ಪರವಾಗಿ ಶುಭ ಹಾರೈಸುತ್ತೇನೆ.

25–12–2014ರಂದು ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ ನಡೆದ ಶ್ರೀ ಶ್ರೀನಿವಾಸ ಕಲ್ಯಾಣ ಮಹೋತ್ಸವದಲ್ಲಿ ಭಾಗವಹಿಸಿ, ಭಗವಂತನ ಕೃಪೆಗೆ ಪಾತ್ರರಾದ ಪ್ರತಿಯೊಬ್ಬರಿಗೂ ನಮಸ್ಕಾರಗಳು. ಇದೇ ಸಂದರ್ಭದಲ್ಲಿ ಸಂಘಕ್ಕೆ ತಲಾ ಹತ್ತು ಸಾವಿರ ರೂಪಾಯಿ ದೇಣಿಗೆ ನೀಡಿದ ಶ್ರೀ ಆರ್. ಭಗವಾನ್, ಶ್ರೀ ಶೇಷಾದ್ರಿ, ಶ್ರೀಮತಿ ರಾಧಾ ಕುಲಕರ್ಣಿ, (ಶ್ರೀ ಶೇಷಾಚಲ)ರವರಿಗೆ ಧನ್ಯವಾದಗಳು.

ಸಂಘಕ್ಕೆ ಹೊಸದಾಗಿ ಸೇರ್ಪಡೆಯಾದ ಪೋಷಕರಿಗೂ, ಸದಸ್ಯರಿಗೂ ದಾನಿಗಳಿಗೂ ವಂದನೆಗಳು. ವಾರ್ಷಿಕ ನಿರ್ವಹಣಾ ವೆಚ್ಚ ಕೇವಲ 250/– ರೂ.ಗಳನ್ನು ಸಂದಾಯಿಸಿದವರಿಗೆ ಧನ್ಯವಾದ ಹಾಗೂ ಸಂದಾಯಿಸದೇ ಇರುವವರು ಕೂಡಲೇ ಸಂದಾಯಿಸಲು ಬಿನ್ನಹ. 'ಬೃಹಚ್ಚರಣ' ಪತ್ರಿಕೆಗೆ ಆರ್ಥಿಕವಾಗಿ ಸಹಾಯ ಮಾಡುವ ಪ್ರಾಯೋಜಕರನ್ನು ಆಹ್ವಾನಿಸುತ್ತೇನೆ. 'ಬೃಹಚ್ಚರಣ' ಪತ್ರಿಕೆಯ ಬಗ್ಗೆ ಮೆಚ್ಚುಗೆ ಸೂಚಿಸಿದವರಿಗೆಲ್ಲಾ ವಂದನೆಗಳು. ಸಮುದಾಯದ ಸಾಧಕರ ಬಗ್ಗೆ ಮಾತ್ರ ನಮ್ಮವರು ಅಂಕಣಕ್ಕೆ ಲೇಖನವನ್ನು ಕಳುಹಿಸಲು ಕೋರಿಕೆ.

2015 ಫೆಬ್ರವರಿ 23ರಂದು ನಡೆಯುವ ನಾಗಾರಾಧನೆ ಹಾಗೂ 24ರಂದು ನಡೆಯಲಿರುವ ಶ್ರೀನಿವಾಸದೇವರ ರಥೋತ್ಸವಕ್ಕೆ ಆದರದ ಆಹ್ವಾನ.





**ತಮ್ಮವ,**

**■ ಎಸ್. ಸೋಮಸುಂದರ**

## ಸಂಪಾದಕೀಯ

ಮಾನ್ಯರೆ,

'ಬೃಹಚ್ಚರಣ' ಪತ್ರಿಕೆಯು ಸಹಕಾರಿ ಮನೋಭಾವನೆಯಿಂದ ಯಾವುದೇ ಲಾಭವಿಲ್ಲದೆ ಸಮುದಾಯದ ಒಗ್ಗೂಡಿಕೆಗಾಗಿ ಸಂಘ ಹೊರ ತರುವ ನಿಯತಕಾಲಿಕ, ತನ್ನದೇ ಚೌಕಟ್ಟಿನಲ್ಲಿ ಕೆಲಸ ನಿರ್ವಹಿಸುತ್ತಿದೆ. ಯಾವುದೇ ಲೇಖನವನ್ನು ಮುದ್ರಿಸುವ ಮುನ್ನ ಗೌರವ ಸಂಪಾದಕ ಮಂಡಳಿ ಸೂಕ್ತ ಕಂಡಲ್ಲಿ ಪದ, ವಾಕ್ಯಗಳನ್ನು ಬದಲಿಸುವ ಸ್ವಾತಂತ್ರ್ಯ ಹೊಂದಿದೆ. ಸಮುದಾಯದ ಸದಸ್ಯರ ಬೆಸುಗೆಗೆ ಆದ್ಯತೆ ನೀಡುವ ಪತ್ರಿಕೆ, ಓದುಗರ ಮನ ಮುಟ್ಟುವಂತಿರಬೇಕೆಂಬ ಆಶಯ ನಮ್ಮದು. ಸಂಘದ ಪತ್ರಿಕೆಗೆ ಆರ್ಥಿಕವಾಗಿ ಸಹಾಯ ನೀಡಲು ಬಯಸುವ ದಾನಿಗಳು, ಜಾಹಿರಾತುದಾರರು, ಪ್ರಾಯೋಜಕರಿಗೆ ಸ್ವಾಗತ.

**ಸಂಘಕ್ಕೆ ಸದಸ್ಯರ ಸೇರಿಸಿ,**
**ಬೃಹಚ್ಚರಣ ಬಳಗ ಬೆಳಸಿ**

ನಿಮ್ಮವ

**■ ಕೆ.ಸಿ.ನಟರಾಜನ್**

ಸಂಪಾದಕ, 9845113475



ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ ಸಂದರ್ಭದಲ್ಲಿ ಬೃಹಚ್ಚರಣ ಸಂಘದಿಂದ ದೇವರಿಗೆ ಅರ್ಪಿಸಿದ ಬೆಳ್ಳಿ ಕಿರೀಟದೊಂದಿಗೆ ಉತ್ಸವ ಮೂರ್ತಿ

'ಬೃಹಚ್ಚರಣ' ವಿಪ್ರಕುಲಕ್ಕೆ ಆಭರಣ, **ಬೃಹಚ್ಚರಣ**

ಮನದಿ ಕರುಣೆ ಸ್ಮರಣ। ತನುವಿನಲಿ ಕಾರ್ಯಾಚರಣ
ಶ್ರೀ ಶಂಕರ ಗುರುಸ್ಮರಣ। ಭಕ್ತವೃಂದಕ್ಕೆ ಭೂಷಣ,
ಬ್ರಹ್ಮ ಜ್ಞಾನವೆ ಲಕ್ಷಣ। ಬ್ರಾಹ್ಮಣರಿಗೆ ವಿಕರಣ ವಿತರಣ–
ಶ್ರೀ ಗುರುವಿನ ಕರುಣ। ಎಲ್ಲರ ದುರಿತ ಹರಣ,
ಪತ್ರಿಕೆಯು ಭೂಷಣ। ಪಾತ್ರರಿಗೆ ವಿಷಯ ಸ್ಫುರಣ–

**ಭ್ರಮರ ಗೋಪಿನಾಥ**

## ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

| | | |
|---|---|---|
| ಅಧ್ಯಕ್ಷರು | : | ಎಸ್. ಸೋಮಸುಂದರ, 9900113298 |
| ಉಪಾಧ್ಯಕ್ಷರು | : | ಕೆ.ಬಿ. ಮುರಳಿ, 9448044164 |
| | | ಕೆ. ಮಂಜುನಾರಾಯಣ್, 9886114279 |
| ಕಾರ್ಯದರ್ಶಿ | : | ವಿ.ಎಸ್. ಮಣಿ, 9845055582 |
| ಸಹಕಾರ್ಯದರ್ಶಿ | : | ವಿ. ಅರುಣ, 9880166001 |
| ಖಜಾಂಚಿ | : | ಎಸ್. ಸತ್ಯನಾರಾಯಣ, 9980945699 |
| ಲೆಕ್ಕಪರಿಶೋಧಕರು | : | ಎಚ್.ಕೆ. ಶಶಿಧರ್, 9845173766 |

ಸದಸ್ಯರು : ಆರ್.ಎ. ಈಶ್ವರನ್, ಟಿ.ಎಸ್. ಮಣಿ, ಎಸ್. ಶ್ರೀನಿವಾಸನ್, ಆರ್. ಗೋಪಾಲಕೃಷ್ಣ, ಎಸ್. ಸಿ. ಶ್ರೀನಿವಾಸ, ಬಿ. ಶ್ರೀಧರ್, ಕೆ. ಜಿ. ವೆಂಕಟೇಶ್, ಸರಸ್ವತಿ ನಟರಾಜನ್, ಎ.ವಿ. ಮಂಜುನಾಥ, ಟಿ.ಪಿ. ಸೂರ್ಯನಾರಾಯಣ, ಆರ್. ಗಣೇಶ ಶ್ರೀಧರ್, ಟಿ.ಎಸ್. ನಾಗೇಶ್, ಟಿ.ಎಸ್. ರಮೇಶ್, ಕೆ.ಸಿ. ನಟರಾಜನ್, ಬಿ. ಸುಬ್ರಹ್ಮಣ್ಯಂ

## ನಾಗಾರಾಧನೆ 2015



**ಬೃಹಚ್ಚರಣ ಬಂಧುಗಳ ಗಮನಕ್ಕೆ**

ಕಿತ್ತಿಗಾನಹಳ್ಳಿಯ ನಾಗೇಶ್ವರ ಕ್ಷೇತ್ರದಲ್ಲಿ ತಾ.23.02.2015ನೇ ಸೋಮವಾರ ಫಾಲ್ಗುಣ ಶುದ್ಧ ಪಂಚಮಿಯಂದು 'ನಾಗಾರಾಧನೆ' ಆಚರಣೆಯು ನಡೆಯಲಿದ್ದು, ಎಲ್ಲ ಬೃಹಚ್ಚರಣ ಬಂಧುಗಳು ತಮ್ಮ ಕುಟುಂಬ ಸಮೇತ ಆಗಮಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭಗವಂತನ ಕೃಪೆಗೆ ಪಾತ್ರರಾಗಲು, ಸಂಘದ ಪರವಾಗಿ ವಿನಂತಿ.

**ಸೋಮಸುಂದರ**
ಅಧ್ಯಕ್ಷರು, ಮೈ.ಮಂ.ದ್ರಾ.ಬೃ.ಸಂಘ

**ವಿಶೇಷ ಸೂಚನೆ**

1. ಹುಂಡಿ ತೆಗೆದುಕೊಂಡಿರುವವರು ನಾಗಾರಾಧನೆಗೆ ಬರುವಾಗ ತಮ್ಮೊಂದಿಗೆ ತಪ್ಪದೆ ತರುವುದು.
2. ಶಾಶ್ವತ ಅನ್ನದಾನಕ್ಕೆ ಉದಾರವಾಗಿ ಧನಸಹಾಯ ನೀಡಲು ವಿನಂತಿ.

## ಶಾಶ್ವತ ಅನ್ನಸಂತರ್ಪಣಾ ನಿಧಿಗೆ ದಾನಿಗಳು

ಶ್ರೀಯುತರಾದ
ದಿ॥ ಎಲ್. ಸತ್ಯನ್ (ಕೆ.ಎಲ್. ಶಾಂತ)
ದಿ॥ ಹೆಚ್.ಡಿ. ಸುಬ್ರಮಣಿ (ಕೆ.ಎಲ್. ಶಾಂತ)
ಶ್ರೀ ರಾಧಕೃಷ್ಣ ಕುಲಕರ್ಣಿ
ಶ್ರೀ ಟಿ.ವಿ.ಎಸ್. ಶರ್ಮ
ದಿ॥ ರಾಜಾಪುರ ಪದ್ಮಾವತಮ್ಮ (ಆರ್. ಭಗವಾನ್)
ಶ್ರೀ ಎ. ಶ್ರೀನಿವಾಸ್
ಶ್ರೀಮತಿ ಮಲ್ಲಿಕಾ ರವಿಶಂಕರ್



## ವೇದಬ್ರಹ್ಮ ಎನ್. ಶಾಮಣ್ಣ ದೀಕ್ಷಿತರು

ಸಾಮಾನ್ಯವಾಗಿ ಎಲ್ಲ ಬೃಹಚ್ಚರಣ ಬಂಧುಗಳಿಗೂ ಕಿತ್ತಿಗಾನಹಳ್ಳಿ ಎಂದೊಡನೆ ನೆನಪಿಗೆ ಬರುತ್ತಿದ್ದ ವ್ಯಕ್ತಿ ಶಾಮಣ್ಣ ದೀಕ್ಷಿತರು. ತಂದೆ ದಿ.ಆಗಮಿಕ ನಂಜುಂಡ ದೀಕ್ಷಿತರು, ತಾಯಿ ದಿ.ನಾರಾಯಣಮ್ಮ, ಸ್ಥಳ ಬಿದರುಗುಪ್ಪೆ, ಆನೇಕಲ್ ತಾಲ್ಲೂಕು.

ಹುಟ್ಟಿದ ಮೊದಲನೇ ವರ್ಷದಲ್ಲೇ ತಾಯಿಯನ್ನು ಕಳೆದುಕೊಂಡ ಇವರು, ತಮ್ಮ ಚಿಕ್ಕಪ್ಪ, ಮುಳಬಾಗಿಲಿನ ಶ್ರೀ ವಿರೂಪಾಕ್ಷೇಶ್ವರ ದೇವಾಲಯದ ಅರ್ಚಕರಾಗಿದ್ದ ಶ್ರೀ ಅಶ್ವತ್ಥದೀಕ್ಷಿತರು ಹಾಗೂ ಮೀನಾಕ್ಷಮ್ಮನವರ ಪೋಷಣೆಯಲ್ಲಿ ಬೆಳೆದು, ಆರನೇ ವಯಸ್ಸಿನಲ್ಲಿ ಸ್ವಗ್ರಾಮ ಬಿದರುಗುಪ್ಪೆಗೆ ವಾಪಸಾಗಿ, ಇಂಡ್ಲಬೆಲೆ ಕೃಷ್ಣಭಟ್ಟರಲ್ಲಿ ವೇದಾಧ್ಯಯನ. ಅಂದಿನ ಎಲ್.ಎಸ್. ಪರೀಕ್ಷೆಯಲ್ಲಿ ತಾಲ್ಲೂಕಿನಲ್ಲೇ ಪ್ರಥಮ ಸ್ಥಾನ ಗಳಿಸಿದರು. ಅಂದಿನ ಇವರ ಶಾಲೆಯ ಮುಖ್ಯೋಪಾಧ್ಯಾಯರು ಖ್ಯಾತ ವಿಜ್ಞಾನಿ ಸಿ.ಎನ್.ಆರ್. ರಾವ್ ಅವರ ತಂದೆ ದಿ. ನಾಗೇಶ ರಾವ್ ಅವರಿಂದ ಪ್ರಶಂಸೆ ಗಳಿಸಿದ ಪ್ರತಿಭಾವಂತರು.

ದಿ.ಶಾಮಣ್ಣ ದೀಕ್ಷಿತರು 1939ನೇ ಇಸವಿಯಲ್ಲಿ ಕಿತ್ತಿಗಾನಹಳ್ಳಿ ಶ್ರೀ ಶ್ರೀನಿವಾಸ ದೇವರ ಪ್ರತಿಷ್ಠಾಪನೆಯಲ್ಲಿ ಭಾಗವಹಿಸಿದ್ದ ಸಮಯದಲ್ಲಿ ಬೃಹಚ್ಚರಣ ಸಮುದಾಯದ ಹಿರಿಯರಾದ, ಶ್ರೀ ಲಕ್ಷ್ಮೀ ನಾರಣಯ್ಯ, ಎಲ್.ಪದ್ಮನಾಭಯ್ಯ, ಕೆ.ಎಲ್.ದಾನಪ್ಪ, ಡಿ.ವಿ.ಜಿ, ಶ್ಯಾತಿಮ್ಮಪ್ಪಯ್ಯ ಹಾಗೂ ಅನೇಕ ಹಿರಿಯರ ಮೆಚ್ಚುಗೆಗೆ ಪಾತ್ರರಾಗಿ, ಸದರಿ ದೇವಾಲಯಕ್ಕೆ ಅರ್ಚಕರಾಗಿ ನೇಮಕಗೊಂಡರು. ಜೊತೆಗೆ ಅತ್ತಿಬೆಲೆಯ ಶ್ರೀ ನಂಜುಂಡೇಶ್ವರ, ಬಿದರುಗುಪ್ಪೆಯ ಶ್ರೀ ಸೋಮೇಶ್ವರ ದೇವಾಲಯಗಳ ಅರ್ಚಕರು ಹಾಗೂ ಸರ್ಕಾರಿ ಪ್ರಾಥಮಿಕ ಶಾಲಾ ಅಧ್ಯಾಪಕರು. ಸರಳ, ಸಜ್ಜನ ವ್ಯಕ್ತಿತ್ವದಿಂದ ಎಲ್ಲರ ಪ್ರೀತಿಗೆ ಪಾತ್ರರಾದವರು, ವೇದಾಧ್ಯಯನದಲ್ಲಿ ಅಪಾರ ಪಾಂಡಿತ್ಯ, ಸಾಹಿತ್ಯ, ಸಂಗೀತಗಳಲ್ಲೂ ಪ್ರೀತಿ. ಅವರ ಸಂಸ್ಕೃತ ಪಾಂಡಿತ್ಯದ ಜೊತೆಗೆ ಭಗವಂತನ ಅನುಗ್ರಹವಾದ ವಿಶೇಷ ಕಂಠ ಸಿರಿ. ವಿಶೇಷ ದೇವತಾ ಕಾರ್ಯಗಳಲ್ಲಿ ಅವರ ಕಂಠಸಿರಿಯಿಂದ 'ಅಯಿಗಿರಿ ನಂದಿನಿ ನಂದಿತ ಮೇದಿನಿ...' ಸಾಲುಗಳನ್ನು ಕೇಳಿದ ಎಲ್ಲರಿಗೂ ಮೈ ರೋಮಾಂಚನ.

ದಿ॥ ಶಾಮಣ್ಣನವರ ವೇದಾಧ್ಯಯನ ಪಾಂಡಿತ್ಯ ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆಗೆ ಮಾತ್ರ ಸೀಮಿತವಾಗದೇ ರಾಜ್ಯದಲ್ಲೂ ಹರಡಿತ್ತು. ಹಂಪೆಯ ವಿದ್ಯಾರಣ್ಯ ಪೀಠ, ಶಿವಗಂಗಾ ಶೃಂಗೇರಿ ಮಠ, ಶೃಂಗೇರಿ ಶಾರದಾ ಪೀಠಗಳೊಂದಿಗೆ ನಿರಂತರವಾದ ಸಂಪರ್ಕ ಹಾಗೂ ಅನೇಕ ಪ್ರಶಸ್ತಿಗಳ ಸ್ವೀಕಾರ. ನೂರಾರು ಪ್ರತಿಷ್ಠಿತ ಕುಂಭಾಭಿಷೇಕಗಳ ನಿರ್ವಹಣೆ. ದಿ. ಶಾಮಣ್ಣನವರಂತೆಯೇ, ಕ್ಷೇತ್ರದ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಅವರ ಮಕ್ಕಳಾದ ಶ್ರೀ ನಂಜುಂಡ ದೀಕ್ಷಿತರು, ಶ್ರೀ ಸೂರ್ಯನಾರಾಯಣ ದೀಕ್ಷಿತರು ಮತ್ತು ಸಹೋದರರು ಸಕ್ರಿಯವಾಗಿ ಪಾಲ್ಗೊಂಡು ಉತ್ತಮ ಸಹಕಾರ ನೀಡುತ್ತಿರುವುದಕ್ಕೆ ಬೃಹಚ್ಚರಣ ಸಂಘವು ಆಭಾರಿಯಾಗಿದೆ.

ಶ್ರೀಯುತರು ದಿನಾಂಕ 23.10.1984ನೇ ನರಕ ಚತುರ್ದಶಿಯಂದು ಇಹಲೋಕ ತ್ಯಜಿಸಿದರು.

–ಸಂ

## ಶ್ರೀ ಶ್ರೀನಿವಾಸ ಕಲ್ಯಾಣೋತ್ಸವದ ಛಾಯಾಚಿತ್ರಗಳು









ಅಕ್ಷತಾ ಆತ್ರೇಶ್



ಛಾಯಾದೇವಿ, ಶ್ರೀನಿವಾಸನ್



ಗಾಯತ್ರಿ, ಶೇಷಾಚಲ



ಜಯಂತಿ ಸತ್ಯನಾರಾಯಣನ್



ಕಸ್ತೂರಿ, ನಿರಂಜನ್



ಮಾನಸ, ಅರವಿಂದ್



ಮಂಗಳ, ಸ್ವಾಮಿನಾಥನ್



ಗಾಯತ್ರಿ, ವೆಂಕಟೇಶ್



ಶ್ರೀಮತಿ, ನಾಗರಾಜ್



ಮೈಥಿಲಿ, ರಮೇಶ್



ನಾಗರತ್ನ, ರಮೇಶ್



ಜಯಲಕ್ಷ್ಮಿ, ವೆಂಕಟೇಶ್


ನಾಗವೇಣಿ, ಭಾಸ್ಕರ್


ನಿರ್ಮಲ, ಶ್ರೀನಿವಾಸಯ್ಯ


ಪದ್ಮಾವತಿ, ಶ್ರೀಕಂಠೇಶ್ವರ್


ಪರಿಮಳ, ಗೋಪಾಲಕೃಷ್ಣ


ಪ್ರಭಾ, ರಾಮಕೃಷ್ಣ


ರಾಧಾ, ವೆಂಕಟೇಶ್


ರೇಖಾ, ರಮೇಶ್


ರೂಪಾ, ಸಂಜಯ್


ರುಕ್ಮಿಣಿ, ಸುಬ್ಬಣ್ಣ


ಸರಸ್ವತಿ, ನಟರಾಜ್


ಸರೋಜಾ, ಲಕ್ಷ್ಮೀನಾರಾಯಣನ್


ಸವಿತಾ, ಜಯರಾಮ್


ಶೈಲಾ, ಸೂರ್ಯನಾರಾಯಣನ್


ಶುಭಾ, ಗೋವಿಂದರಾವ್


ಸುಧಾ, ರವಿಶಂಕರ್



ಸೂರ್ಯಕುಮಾರಿ, ಭಗವಾನ್



ಸುಷ್ಮಾ, ಅಶೋಕ್



ಸುಷ್ಮಾ, ರಘುನಂದನ್



ತಾರಾ, ರವೀಂದ್ರ



ಉಮಾ, ನಾಗರಾಜ್



ಉಮಾ, ಶೇಖರ್



ವಾಗ್ದೇವಿ, ಬದ್ರೀನಾರಾಯಣನ್



ವಸಂತ, ವೆಂಕಟಸುಬ್ಬರಾವ್



ವಸುಧಾ, ಸ್ವಾಮಿನಾಥನ್



ವಸುಮತಿ, ರವಿಕುಮಾರ್



ವೀಣಾ, ರವಿ



ಕೃಷ್ಣಸ್ವಾಮಿ



ಮಹಾ ಮಂಗಳಾರತಿ



ಪ್ರಸಾದ ಸ್ವೀಕಾರ



ಪ್ರಸಾದ ಸ್ವೀಕಾರ



# ಮಂಕುತಿಮ್ಮನ ಕಗ್ಗದ ತಾತ್ಪರ್ಯ

■ ಶ್ರೀಮತಿ ಜೆ.ಪಿ. ಲಕ್ಷ್ಮೀದೇವಿ

"ದೇವರೆಂಬುದೇನು ಕಗ್ಗತ್ತಲ ಗವಿಯೇ?
ನಾವರಿಯಲಾರದೆಲ್ಲದರೊಟ್ಟು ಹೆಸರೇ?
ಕಾವನೋರವನಿರಲ್ಕೆ ಜಗದ ಕಥೆಯೇಕಿಂತು?
ಸಾವು ಹುಟ್ಟುಗಳೇನು? ಮಂಕುತಿಮ್ಮ"!!

ದೇವರು ಎನ್ನುವುದು ಅಷ್ಟು ಗಹನವೇ? ಅದು ಕಗ್ಗತ್ತಲಿನಲ್ಲಿ ಇದೆಯೇ? ನಮಗೇನೇನು ತಿಳಿದಿಲ್ಲವೋ ಅದೆಲ್ಲವೂ ನಾಮವೇ? ಹೆಸರೇ? ಪ್ರಪಂಚವನ್ನೆಲ್ಲಾ ಆಳುವನೊಬ್ಬನಿರಲು ಜಗತ್ತಿನ ಕಥೆ ಏಕೆ ಹೀಗಿದೆ? ಸಾವು ಹುಟ್ಟುಗಳೇನು? ಜನನ ಮರಣಗಳು ಇವೇ ಏನು?

ವಿಷ್ಣು ಸಹಸ್ರನಾಮದಲ್ಲಿ 'ಗುಹ್ಯ ಗಂಭೀರ ಗಹನೋ ಗುಪ್ತ' ಎಂಬ ಪದಗಳಿವೆ. ಗುಹ್ಯವಾಗಿದ್ದಾನೆಯೇ? ದೇವಮೂಲ ಋಷಿಮೂಲ ನದಿ ಮೂಲವನ್ನು ಕಂಡುಹಿಡಿಯಲು ಅಸಾಧ್ಯ ಗುಹೆಯಲ್ಲಿ ಹೃದಯದ ಆಕಾರದಲ್ಲಿ ಇರತಕ್ಕವನು. ಹೃದಯ ಕಮಲದಲ್ಲಿ ಗುಪ್ತವಾಗಿ ಇರುವವನು. ಆದರಂತೆಯೇ ಭಗವಂತನ ಅರಿವನ್ನು ಅಸ್ತಿತ್ವವನ್ನು ಜ್ಞಾನದಿಂದ ಅರಿಯಲು ಸಾಧ್ಯ. ಪಾಮರರಿಗೆ ಭಗವಂತ ಕಗ್ಗತ್ತಲೆಯ ಗವಿಯಲ್ಲಿ ಕಾಣದಂತೆ ಇದ್ದಾನೆ. ಆದರೆ ಋಷಿಗಳು, ಜ್ಞಾನಿಗಳು ಅವನ ದರ್ಶನ ಮಾಡಿದರು. ಅವನು ಕಾಣದೇ ಸೂಕ್ಷ್ಮರೂಪದಲ್ಲಿದ್ದು ತನ್ನ ಇರುವಿಕೆಯನ್ನು ತೋರುತ್ತಾನೆ. ಅವನ ಅಸ್ತಿತ್ವವನ್ನು ತಿಳಿಯಲಾರದವರು ಅವನನ್ನು ಅರಿತಿಲ್ಲ. ಆದ್ದರಿಂದ ಅರಿಯಲಾಗದ ಒಟ್ಟು ಗೂಡಿದ ಒಂದು ವಸ್ತುವೇ? ಭಗವಂತ ಇದ್ದಾನೆ ಎಂದು ತಿಳಿದರೂ, ಅವನೇ ಸಂರಕ್ಷಣ ಮಾಡುವವನು ಎಂದು ಅರಿತಾಗ ಪ್ರಪಂಚದ ಕಥೆ ಏಕೆ ಹೀಗಿದೆ? ಒಬ್ಬರ ದುಃಖ ಮತ್ತೊಬ್ಬರಿಗೆ ಸುಖ-ಶಾಂತಿ-ಅಶಾಂತಿ-ಜನನ-ಮರಣ ಇವೆಲ್ಲಾ ದ್ವಂದ್ವಗಳೇ. ಜಾತಸ್ಯ ಮರಣಂ ಧ್ರುವಂ ಎಂದು ತಿಳಿದಿದ್ದರೂ ಮರಣ ಬಂದಾಗ ನೋವೇಕೆ? ವ್ಯಥೆಯೇಕೆ ಭಗವಂತನ ಮೇಲೆ ಕೋಪವೇಕೆ? ಎಲ್ಲವೂ ಒಗಟಾದ ಪ್ರಶ್ನೆ ಸಮಸ್ಯೆಗೆ ಸಿಗಲಾರದ ಉತ್ತರಗಳು. ಪರಿಹಾರ ಇಲ್ಲದ ಪ್ರಶ್ನೆಗಳು ಎಂದಿದ್ದಾರೆ ಕವಿಗಳು.


## ನಮ್ಮನ್ನಗಲಿದ ನಮ್ಮವರು

ಶ್ರೀ ಚಂದ್ರಶೇಖರ
ಶ್ರೀಮತಿ ಶಾಂತ ರಾಮಚಂದ್ರ
ಶ್ರೀಮತಿ ಲಾಯರ್ ಅನಸೂಯಮ್ಮ, (18.11.2014)
ಶ್ರೀ ಆಟ್ಟೂರು ರಾಜಗೋಪಾಲ್ (19.11.2014)
ಶ್ರೀ ವೈ.ಜಿ. ಶ್ಯಾಮಶಾಸ್ತ್ರಿ (18.11.2014)
ಶ್ರೀ ರವಿ ಎನ್. ಶರ್ಮ, (17.12.2014)




ಹಾವುರಾಣಿ ಸರೀಸೃಪದ ಜಾತಿಗೆ ಸೇರಿದ ಪ್ರಾಣಿ. ಇದು ಸಾಮಾನ್ಯವಾಗಿ 20 ಸೆಂ.ಮೀ. ಉದ್ದ ಬೆಳೆಯುತ್ತದೆ. ಆದರೆ ಕೆಲವು ಕೇವಲ 10 ಸೆಂ.ಮೀ. ಉದ್ದ ಮಾತ್ರ ಬೆಳೆಯುತ್ತವೆ. ಹೆಣ್ಣು ಹಾವುರಾಣಿಯು ಗಂಡು ಜೊತೆ ಸಂಭೋಗ ನಡೆಸಿದಾಗ ಸುಮಾರು 250 ಮೊಟ್ಟೆಗಳನ್ನು ಇಡುತ್ತದೆ. ಎಲ್ಲಾ ಸರೀಸೃಪಗಳಂತೆಯೇ, ಇವು ಬಾಲವನ್ನು ಜೋರಾಗಿ ಅಲ್ಲಾಡಿಸಿ, ತನ್ನ ಬೇಟೆಯ ಮೇಲೆ ನಿಗಾ ಇಡುತ್ತದೆ. ಸಾಮಾನ್ಯವಾಗಿ ಕಪ್ಪುಮಿಶ್ರಿತ ಕಂದುಬಣ್ಣದ್ದಾಗಿರುತ್ತದೆ. ಕೆಲವು ಬಾರಿ, ತುಂಬಾ ಬಿಸಿಲಿನಲ್ಲಿ, ಇವುಗಳು ಕಡು ಕೆಂಪು ಬಣ್ಣದಂತೆ ಕಾಣುತ್ತದೆ. ಸಾಮಾನ್ಯವಾಗಿ ಇದರ ಆಹಾರ ಸಣ್ಣ ಕ್ರಿಮಿ ಕೀಟಗಳು, ಎರೆಹುಳ, ನೊಣ, ಮಿಡತೆ, ಜಿರಳೆ, ಸಣ್ಣ ಜೇಡ ಹುಳ, ಇರುವೆ ಇತ್ಯಾದಿ. ಇವು ಬಾಳೆಹಣ್ಣು, ಸ್ಟ್ರಾಬೆರ್ರಿಗಳನ್ನು ಕೂಡ ಇಷ್ಟಪಡುತ್ತವೆ. ತನ್ನ ಬೇಟೆಯ ಚಲನೆಯನ್ನು ಅವಲಂಬಿಸಿ ಬೇಟೆಯಾಡುತ್ತದೆ. ಬೇಟೆಯು ಚಲಿಸದಿದ್ದಾಗ, ತನಗೆ ಬೇಟೆಯು ಕಾಣಿಸದ ಕಾರಣ ಬೇಟೆಯಾಡುವುದಿಲ್ಲ. ಬೇಟೆಯಾಡುವಾಗ ಅವಿತುಕೊಂಡು ಅಥವಾ ಕಾದು ಬೇಟೆಯಾಡುತ್ತದೆ. ಬೇಟೆಯನ್ನು ಬಾಯಲ್ಲಿ ಹಿಡಿದಾಗ, ಅದನ್ನು ಜೋರಾಗಿ ಅಲ್ಲಾಡಿಸಿ ಸಾಯಿಸುತ್ತದೆ. ನಂತರ ಅದನ್ನು ಇಡಿಯಾಗಿ ನುಂಗುತ್ತದೆ. ಊಟವಾದ ಬಳಿಕ ಬೇಟೆಯಾಡುವುದಿಲ್ಲ. ಸಾಮಾನ್ಯವಾಗಿ 4–5 ದಿನಕ್ಕೊಮ್ಮೆ ಬೇಟೆಯಾಡುತ್ತದೆ. ಆದರೆ, ಪ್ರತಿದಿನವೂ ಆಹಾರವನ್ನು ಬೇಟೆಯಾಡಿ ಕೂಡ ತಿನ್ನುತ್ತದೆ.

ಸಾಮಾನ್ಯವಾಗಿ ಎಲೆಗಳ ಮರೆಯಲ್ಲಿ ಮತ್ತು ಉದ್ದನೆಯ ಹುಲ್ಲುಗಳ ನಡುವೆ ಇದ್ದು ಬೇಟೆಯಾಡುತ್ತದೆ. ತನಗಿಂತ ದೊಡ್ಡ ಪ್ರಾಣಿಗಳ ಬಾಯಿಗೆ ಸಿಗಬಾರದೆಂದು ಇವು ಮರದ ದಿಮ್ಮಿಗಳ ಒಳಗೆ ಇರಲು ಇಷ್ಟ ಪಡುತ್ತವೆ. ಎಲ್ಲಾ ಸರೀಸೃಪಗಳಂತೆಯೇ ಇವುಗಳು ಕೂಡ ಪರಿಸರದ ಶಾಖವನ್ನು ಅವಲಂಬಿಸಿದ ಉಷ್ಣತೆಯುಳ್ಳ ಪ್ರಾಣಿಗಳು (Cold Blooded). ಹಾಗಾಗಿ, ಇವುಗಳು, ಬೆಳಗಿನ ಜಾವ ಬಂಡೆಯ ಮೇಲೆ, ಅಥವಾ ರಸ್ತೆಯ ಮೇಲೆ ತನ್ನ ಮೈಯನ್ನು ಉಷ್ಣವಾಗಿರಿಸಿಕೊಳ್ಳಲು ಬಿಸಿಲನ್ನು ಕಾಯುತ್ತದೆ. ಸಾಮಾನ್ಯವಾಗಿ ಇವು, ಮರದ ಎಲೆಗಳ ಅಡಿಯಲ್ಲಿ, ಅತ್ಯಂತ ಶಾಖವಿರುವ ಪ್ರದೇಶಗಳಲ್ಲಿ ಕಾಣಸಿಗುತ್ತವೆ. ಹಾವುರಾಣಿಗಳನ್ನು ಆಹಾರವಾಗಿ ತಿನ್ನುವ ಜೀವಿಗಳೆಂದರೆ, ಹಾವುಗಳು, ಕೆಂಪು ಎದೆಯ ಹಕ್ಕಿ (robin) ಹಾಗೂ ದೊಡ್ಡ ಹಲ್ಲಿಗಳು. ಈ ಚಿತ್ರದಲ್ಲಿರುವ ಹಾವುರಾಣಿ ನನಗೆ ಕಾಣಿಸಿದ್ದು ಜೋಗದಲ್ಲಿ. ಇದು ತನ್ನ ಬೇಟೆಯನ್ನು ಹುಡುಕುತ್ತಿತ್ತು. ಆಗ ಇದನ್ನು ಸೆರೆಹಿಡಿದೆ. ಇನ್ನು ಇದರ ಪರಿಚಯ ಮಾಡೋಣ ಅನ್ನಿಸಿ ಲೇಖನ ಬರೆದದ್ದು.



■ ಅನಿಲ್ ರಮೇಶ್
9980027189



# ಸಂಕ್ರಾಂತಿ

'ಸಂಕ್ರಾಂತಿ' ಎಂಬ ಪದವು 'ಸಮ್ಯಕ್' ಎಂದರೆ ಸರಿಯಾದ ರೀತಿಯ ಕ್ರಾಂತಿಯನ್ನು ತಿಳಿಸುತ್ತದೆ. ಸರಿಯಾದ ಕ್ರಾಂತಿಯನ್ನು ಪ್ರಕೃತಿಯ ಹಲವು ವಿಷಯಗಳಲ್ಲಿ ಕಾಣಬಹುದು. ಭಗವಂತನ ಸೃಷ್ಟಿ, ಸ್ಥಿತಿ, ಲಯಗಳಲ್ಲಿ ಸರಿ ಮತ್ತು ತಪ್ಪು ಎಂಬ ಶಬ್ದಗಳೇ ಒಪ್ಪುವುದಿಲ್ಲ. ಎಲ್ಲವೂ ನಿಯಮದಂತೆ ನಡೆಯುತ್ತಿರುತ್ತದೆ. ಜ್ಞಾನ ದೃಷ್ಟಿಯಿಂದ ಗಮನಿಸಿದಾಗ ಪ್ರಕೃತಿಯಲ್ಲಿ ಆಗುವ ನಿರಂತರ ಬದಲಾವಣೆಯ ಅರಿವಾಗುತ್ತದೆ. ಈ ಬಗೆಯ ಕ್ರಾಂತಿಯ ದರ್ಶನದಿಂದ ಮಾನವನೂ ತನ್ನ ಬದಲಾಗುತ್ತಲೇ ಇರುವ ಬದುಕಿನ ಹಾದಿಯಲ್ಲಿ ಪರಿವರ್ತನೆಯಾಗಲು ಅನುಕೂಲವಾಗುತ್ತದೆ. ಸಂಕ್ರಾಂತಿಯನ್ನು ಹಬ್ಬವಾಗಿ ಪುಷ್ಯಮಾಸದಲ್ಲಿ ಆಚರಿಸುತ್ತಾರೆ. ಭೂತಾಯಿಯ ಮಡಿಲಿನಿಂದ ಬರುವ ಹೊಸ ಫಸಲಿಗೆ ಪೂಜೆ ಮಾಡಿ, ನಂತರ ಧಾನ್ಯಗಳನ್ನು ಉಪಯೋಗಿಸಲು ಪ್ರಾರಂಭ ಮಾಡುವ ಸಂಪ್ರದಾಯ ಬೆಳೆದುಬಂದಿದೆ.

ಸಂಕ್ರಾಂತಿ ಹಬ್ಬದ ಹಿಂದಿನ ದಿನ ಕೆಲವರು ಭೋಗಿ ಹಬ್ಬ ಆಚರಿಸುತ್ತಾರೆ. ಬೇಡದ ವಸ್ತುಗಳನ್ನು ಮನೆಯ ಹೊರಗಿಟ್ಟು ಅವುಗಳಿಗೆ ಅಗ್ನಿ ಸ್ಪರ್ಶ ಮಾಡುತ್ತಾರೆ. ಪ್ರತೀ ಹುಟ್ಟಿಗೂ ಒಂದು ಕೊನೆ ಇದೆ ಎನ್ನುವುದರ ಸಂಕೇತ. ಸಂಕ್ರಾಂತಿ ಹಬ್ಬದ ಮುಂದಿನ ದಿನವನ್ನೂ ದನ, ಕರು, ಎತ್ತು ಅಂತಹ ಪಶುಗಳನ್ನು ಪೂಜಿಸುತ್ತಾರೆ. ರೈತರ ಉಳುಮೆಗೆ ಸಹಾಯ ಮಾಡುವ ಪಶುಗಳನ್ನು ಪ್ರೀತಿಯಿಂದ ಆದರಿಸಿ, ಗೌರವಿಸಿ ಮತ್ತು ಅಲಂಕರಿಸಿ ಅವುಗಳೊಂದಿಗೆ ಆಟ, ಹಾಡು, ಓಟಗಳೊಂದಿಗೆ ಹಬ್ಬ ಮಾಡುತ್ತಾರೆ.

ಸಂಕ್ರಾಂತಿಯ ಮಹತ್ವಗಳಲ್ಲಿ ಸೂರ್ಯನದು ಪ್ರಮುಖ ಪಾತ್ರ. ಸೂರ್ಯನ ಕಿರಣಗಳು ಭೂಮಿಯ ಅಕ್ಷಾಂಶಗಳಲ್ಲಿ ಒಂದಾದ ಮಹತ್ವದ ಮಕರ ಸಂಕ್ರಾಂತಿ ವೃತ್ತದ ಮೇಲೆ ನೇರವಾಗಿ ಬೀಳುತ್ತದೆ. ಅಂದಿನಿಂದ ಭೂಮಿಯ ಕಕ್ಷೆಯಲ್ಲೂ ಬದಲಾವಣೆ ಆಗುತ್ತದೆ.

ಋತು ಬದಲಾವಣೆ ಪ್ರಕಾರ ಹೇಮಂತದಿಂದ ಶಿಶಿರ ಋತುವಿಗೆ ಕಾಲಿಡುವ ಈ ಮಾಸದಲ್ಲಿ ಸಕ್ರಾಂತಿಯಂದು ಉತ್ತರಾಯಣ ಪ್ರಾರಂಭ ಆಗುತ್ತದೆ. ಅಂದಿನಿಂದ ಆರು ತಿಂಗಳವರೆಗೆ ಉತ್ತರಾಯಣ ಮುಂದುವರೆಯುತ್ತದೆ. ಮಹಾಭಾರತದಲ್ಲಿ ಕುರುವಂಶದ ಮಹಾನ್ ವ್ಯಕ್ತಿ ಭೀಷ್ಮಾಚಾರ್ಯರು ಕುರುಕ್ಷೇತ್ರ ಯುದ್ಧದಲ್ಲಿ ಹೋರಾಡಿ, ಅರ್ಜುನನಿಂದ ನಿರ್ಮಾಣಗೊಂಡ ಶರಶಯ್ಯೆಯಲ್ಲಿ ಗಾಯಗೊಂಡು ಮಲಗಿ, ಉತ್ತರಾಯಣ ಪುಣ್ಯಕಾಲದಲ್ಲೇ ಮರಣ ಅಪ್ಪಬೇಕೆಂದು ಇಚ್ಛಿಸಿದರು. ಅವರಿಗೆ ಇಚ್ಛಾ ಮರಣದ ವರ ಇತ್ತು. ಈ ಕಾಲದಲ್ಲಿ ಮರಣಿಸುವವರಿಗೆ ಪುನರ್ಜನ್ಮ ಇರುವುದಿಲ್ಲ ಎಂಬ ನಂಬಿಕೆ ಇದೆ. ಯಾವುದಾದರೂ ಭಯ ಅಥವಾ ಬಯಕೆ ಬಗ್ಗೆ ಪ್ರಶ್ನೆ ಇದ್ದರೇನೇ ಪುನರ್ಜನ್ಮ ಬರುವುದು. ಉತ್ತರ ಬೇಕಾಗುವುದು ಪ್ರಶ್ನೆ ಇದ್ದಾಗ ಮಾತ್ರ, ಸಾವಿನ ಸಮಯದಲ್ಲಿ ಯಾವುದೇ ಪ್ರಶ್ನೆಗಳಿಲ್ಲದಿದ್ದಲ್ಲಿ ಪುನಃ ಜನ್ಮ ಎತ್ತಿ ಉತ್ತರ ಪಡೆಯಬೇಕೆನ್ನುವ ವಿಷಯವೇ ಬರುವುದಿಲ್ಲ.

ಸಂಕ್ರಾಂತಿಯ ಸಂಕ್ರಮಣದಂದು ಪುಣ್ಯನದಿಗಳಲ್ಲಿ ಸ್ನಾನ ಮಾಡುವುದೂ ರೂಢಿಯಲ್ಲಿದೆ. ಸಂಕ್ರಾಂತಿ ಹಬ್ಬದಂದು ಹೊಸ ಅಕ್ಕಿ, ಹೆಸರುಬೇಳೆ, ಬೆಲ್ಲ, ತೆಂಗಿನಕಾಯಿ ಬಳಸಿ ಹುಗ್ಗಿಯನ್ನು ತಯಾರಿಸುತ್ತಾರೆ. ಅಂದು ವಿಶೇಷವಾಗಿ ಎಳ್ಳು, ಕೊಬ್ಬರಿ, ಬೆಲ್ಲ, ಕಡಲೆಕಾಯಿಬೀಜ, ಹುರಿಗಡಲೆ ಸೇರಿಸಿ ದೇವರಿಗೆ ನೈವೇದ್ಯ ಮಾಡಿ ಬಂಧು ಬಾಂಧವರಿಗೆ, ನೆರೆಹೊರೆಯವರಿಗೆ, ಸ್ನೇಹಿತರಿಗೆ, ಕೊಟ್ಟು 'ಎಳ್ಳು, ಬೆಲ್ಲ ತಿಂದು ಒಳ್ಳೆಯ ಮಾತಾಡಿ' ಎನ್ನುವಂತೆ ಒಬ್ಬರಿಗೊಬ್ಬರು ಸಂತೋಷ ಹಂಚಿಕೊಳ್ಳುತ್ತಾರೆ. ಇದರೊಂದಿಗೆ ಸಕ್ಕರೆ ಅಚ್ಚು, ಬಾಳೆಹಣ್ಣು, ಕಬ್ಬುಗಳನ್ನೂ ಕೊಡುತ್ತಾರೆ. ಸಕ್ಕರೆ ಅಚ್ಚುಗಳಲ್ಲಿ ಸುಂದರ ಕಲಾಕೃತಿಯ ಮಾದರಿಗಳನ್ನು ಮಾಡುವುದರಲ್ಲಿ ಹೆಂಗೆಳೆಯರ ನಾಜೂಕುತನವೂ ಪ್ರದರ್ಶನ ಆಗುತ್ತದೆ. ಈ ಪದಾರ್ಥಗಳನ್ನೆಲ್ಲಾ ಏಕೆ ಬಳಸುತ್ತಾರೆ ಎನ್ನುವುದಕ್ಕೂ ಒಂದು ಅರ್ಥ ಇದೆ. ಮಾರ್ಗಶಿರ, ಪುಷ್ಯ ಮಾಸದ ಚಳಿಯಿಂದ ಜನರಲ್ಲಿ ಒಣಚರ್ಮದ ಅನುಭವ ಇರುತ್ತದೆ. ಇಂತಹ ಪದಾರ್ಥಗಳನ್ನು ಸೇವಿಸುವುದರಿಂದ ನೈಸರ್ಗಿಕವಾಗಿ ಎಣ್ಣೆ ಅಂಶ ಚರ್ಮಕ್ಕೆ ಸೇರುತ್ತದೆ. ಸಿಹಿ ಪದಾರ್ಥ ಸೇವನೆಯೂ ದೇಹಕ್ಕೆ ಆರೋಗ್ಯ ಕೊಡುತ್ತದೆ.

ಬೆಂಗಳೂರಿನ ಗವೀಪುರಂ ಬಡಾವಣೆಯ ಪುರಾತನ ದೇವಾಲಯಗಳಲ್ಲೊಂದಾದ ಸಂಕ್ರಮಣದ ದಿನ ಗವೀಗಂಗಾಧರೇಶ್ವರನ ಗುಡಿಯಲ್ಲಿನ ಗರ್ಭಗುಡಿಯ ಶಿವಲಿಂಗದ ಪಾದದ ಬಳಿ ಸಂಜೆ ಸರಿಯಾಗಿ 5 ಘಂಟೆಗೆ ಸೂರ್ಯನ ಕಿರಣಗಳು ಶಿವಲಿಂಗಕ್ಕೆ ನಮಿಸುವಂತೆ ಗೋಚರಿಸುತ್ತದೆ. ಪ್ರಕೃತಿಯ ವಿಸ್ಮಯಗಳಲ್ಲಿ ಇದೂ ಒಂದು. ಸೂರ್ಯನ ಕಿರಣ ಭೂಮಿಗೆ ತಲುಪುವ ಸಂಕ್ರಮಣ ದಿನವನ್ನು ಲೆಕ್ಕಚಾರ ಮಾಡಿ ನಮ್ಮ ಹಿಂದಿನ ಪಂಡಿತರು, ವಿದ್ವಾಂಸರು, ಪರಿಣತರು ಈ ಜಾಗದಲ್ಲಿ ದೇವಾಲಯವನ್ನು ನಿರ್ಮಿಸಿದ್ದಾರೆ. ಇದು ಒಂದು ಹೆಮ್ಮೆಯ ವಿಷಯ. ಸಂಕ್ರಾಂತಿಯ ದಿನದಿಂದ ಪ್ರಕೃತಿಯಲ್ಲಿ ಹೊಸತನ ಎದ್ದು ಕಾಣುತ್ತದೆ. ಪ್ರಕೃತಿಯ ಅಂಗವಾದ ಮಾನವನ ಜೀವನದಲ್ಲೂ ನೂತನ ಚಿಂತನೆ, ಸಂತಸ ಪ್ರಾರಂಭಿಸಿ ಮುಂದುವರೆಯುವುದನ್ನು ಎಲ್ಲೆಡೆ ಕಾಣುವ ಭಾಗ್ಯ ಎಲ್ಲರದಾಗಲಿ.

–ರಾ. ರಮೇಶ್

*9886034048*



## ಸಂಕ್ರಾಂತಿ

ಕ್ರಾಂತಿಯ ಬಾಳಿಗೆ ಸಂಕ್ರಾಂತಿ, ಶಾಂತಿ ಮೂಡಿ ಸಂಸ್ಕೃತಿ
ಹೊಸವರುಷ ಹೊಸತು ಹೊಸತು, ಹಸೆ ಹಾಕಿದೆ ಬಣ್ಣ ಬೆರೆತು
ಹಸನಾಗಿ ಎಳ್ಳುಬೆಲ್ಲ ಥಳಕು, ಹಾಸ್ಯ, ಗಾನ, ಭಕ್ತಿ ಬೆಳಕು
ಎಳ್ಳು ಬೆಲ್ಲ ಬೀರಿ ಬೀರಿ, ಒಳ್ಳೆ ಮಾತು ಸಾರಿ ಸಾರಿ
ಸುಳ್ಳು ಕುಹಕ ಎಲ್ಲಾ ಮೀರಿ, ಒಳ್ಳೆ ಬಾಳಿಗೆ ನಗೆ ಬೀರಿ
ಎಳ್ಳು ತಿಂದು ಒಳ್ಳೆ ಮಾತು, ಮುಳ್ಳುಬೇಡ ಬಾಳೇ ತೂತು
ಜಳ್ಳು ತೂರಿ ಕಾಳುಬಂತು, ಪೊಳ್ಳು ಬೇಡ – ಒಳ್ಳೆ ತಂತು



■ ಕೇಶವ ಭಗಿನಿ
26677574

# ಮೈಸೂರು-ಮಂಜಪತ್ತೂರು ದ್ರಾವಿಡ

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ

**JANUARY**

| S | M | T | W | T | F | S |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

**FEBRUARY**

| S | M | T | W | T | F | S |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |

**MARCH**

| S | M | T | W | T | F | S |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

**APRIL**

| S | M | T | W | T | F | S |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | | |

**MAY**

| S | M | T | W | T | F | S |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

**JUNE**

| S | M | T | W | T | F | S |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | | | | |

## ನಮ್ಮ ಹಬ್ಬಗಳು

| | | |
|---|---|---|
| ಜನವರಿ | 15 | ಮಕರ ಸಂಕ್ರಾಂತಿ |
| | 26 | ರಥಸಪ್ತಮಿ/ಗಣರಾಜ್ಯೋತ್ಸವ |
| ಫೆಬ್ರವರಿ | 17 | ಮಹಾ ಶಿವರಾತ್ರಿ |
| | 23 | ಕಿತ್ತಿಗಾನಹಳ್ಳಿ ನಾಗಾರಾಧನೆ |
| ಮಾರ್ಚ್ | 21 | ಚಂದ್ರಮಾನ ಯುಗಾದಿ |
| | 28 | ಶ್ರೀರಾಮನವಮಿ |
| ಏಪ್ರಿಲ್ | 23 | ಶಂಕರ ಜಯಂತಿ |
| ಜುಲೈ | 31 | ಗುರು ಪೌರ್ಣಿಮಾ |
| ಆಗಸ್ಟ್ | 15 | ಸ್ವಾತಂತ್ರ್ಯ ದಿನಾಚರಣೆ |
| | 28 | ವರಮಹಾಲಕ್ಷ್ಮಿ ವ್ರತ |
| | 28 | ಋಗ್ ಉಪಾಕರ್ಮ |
| | 29 | ಯಜುರ್ ಉಪಾಕರ್ಮ |
| ಸೆಪ್ಟೆಂಬರ್ | 05 | ಕೃಷ್ಣ ಜನ್ಮಾಷ್ಟಮಿ |
| | 16 | ಸ್ವರ್ಣಗೌರಿ ವ್ರತ |
| | 17 | ವಿನಾಯಕ ವ್ರತ |
| | 27 | ಅನಂತಪದ್ಮನಾಭ ವ್ರತ |
| ಅಕ್ಟೋಬರ್ | 12 | ಮಹಾಲಯ ಅಮಾ |
| | 22 | ಆಯುಧಪೂಜೆ |
| | 23 | ವಿಜಯದಶಮಿ |
| ನವೆಂಬರ್ | 1 | ಕನ್ನಡ ರಾಜ್ಯೋತ್ಸವ |
| | 10 | ನರಕ ಚತುರ್ದಶಿ |
| | 12 | ಬಲಿಪಾಡ್ಯಮಿ |
| | 23 | ಹನುಮಜ್ಜಯಂತಿ |

# ಬೃಹಚ್ಚರಣ ಸಂಘ (ರಿ), ಬೆಂಗಳೂರು

## 2015ನೇ ವರ್ಷದ ಶುಭಾಶಯಗಳು

### JULY

| S | M | T | W | T | F | S |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

### AUGUST

| S | M | T | W | T | F | S |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

### SEPTEMBER

| S | M | T | W | T | F | S |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |

### OCTOBER

| S | M | T | W | T | F | S |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

### NOVEMBER

| S | M | T | W | T | F | S |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |

### DECEMBER

| S | M | T | W | T | F | S |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

*With Best Compliments from*

**V. S. Mani**

**Visma Aromas**

Bengaluru
M : 98450 55582

V. Arun & V. Ashok

**Esvee Stationers**

P. B. No. 7937, No. 51
S.M. Lane, Akkipet
Bengaluru - 560 053
Ph : 080-26701974,41225304
Fax : 080-26702931
Email : sales@esveestationers.com

**Sree Ganesh Motor Service**

Sarjapura Rameshwaraih
Lakshminarayana Family
S.C. Sreenivasa
M : 98453 76949
No. 23, 'Sree Ganesh'
17th Main, BTM 2nd Stage
N.S. Palya, Bengaluru-56

**Koundinya Enterprises**

R. A. Eshwaran
T. S. Mani

Mob : 9845556503
98055176335

# ರಂಗೋಲಿ

'ರಂಗೋಲಿ' ಎಂಬ ಪದಕ್ಕೆ ಸಂಸ್ಕೃತದಲ್ಲಿ ವ್ಯಕ್ತಿಯ ಕಲಾತ್ಮಕ ದೃಷ್ಟಿ ಮತ್ತು ಮನ ಸೆಳೆಯುವ ಬಣ್ಣಗಳ ಚಿತ್ತಾರ ಎಂಬ ಅರ್ಥ ಇದೆ. 'ರಂಗೋಲಿ'ಯು ಭಾರತೀಯ ಸಂಸ್ಕೃತಿಯ ಪ್ರಖ್ಯಾತ ಕಲೆಗಳಲ್ಲೊಂದು ಈ ಕಲೆಯು ಅತ್ಯಂತ ಪುರಾತನವಾದ ಸಿಂಧೂ ಕಣಿವೆ ನಾಗರೀಕತೆ ಕಾಲದಲ್ಲೇ ಇತ್ತೆಂದು ಭಾರತೀಯ ಪುರಾತತ್ತ್ವ ಇಲಾಖೆಯ ಪ್ರಕಾರ ಉಲ್ಲೇಖವಾಗಿದೆ.

ರಂಗೋಲಿಯಲ್ಲಿ ಬಳಸುವ ಚುಕ್ಕೆಗಳು, ರೇಖೆಗಳು ರೇಖಾಗಣಿತ ದಲ್ಲಿನ ಆಕಾರವನ್ನೇ ಅವಲಂಬಿಸಿರುತ್ತದೆ. ಈ ತರಹದ ವಿನ್ಯಾಸ ಮನಸ್ಸಿಗೆ ಮುದ ನೀಡುವಂತಹುದು ಸಮಾನಾಂತರವಾಗಿ ಇಡುವ ರಂಗೋಲಿ, ಇಡುವವದರ ಮನಸ್ಸಿನ ಸಮತ್ವ, ಕುಶಲತೆ ಹೇಳುತ್ತದೆ.

ರಂಗೋಲಿಯನ್ನು ಮನೆಗಳ ಮುಂದೆ ಬೆಳಗಿನ ಹೊತ್ತಿನಲ್ಲಿ ಹೆಂಗಳೆಯರು ಇಡುವ ಸಂಪ್ರದಾಯ ಇದೆ. ಈ ರೀತಿ ಸೂರ್ಯೋದಯ ಸಮಯಕ್ಕೆ ಮನೆಯ ಮುಂದೆ ಗುಡಿಸಿ, ನೀರು ಹಾಕಿ ಕೆಲವೊಮ್ಮೆ ಕ್ರಿಮಿ ನಿರೋಧಕವಾದ ಹಸುವಿನ ಸಗಣಿಯಿಂದಲೂ ಸಾರಿಸಿ, ರಂಗೋಲಿ ಬಿಡಿಸುವುದು ರೂಢಿಯಲ್ಲಿದೆ. ಮನೆಯ ಗೃಹಕೃತ್ಯಗಳನ್ನು ಸಮರ್ಥವಾಗಿ ಎದುರಿಸಿ, ಸುಗಮವಾಗಿ ನಡೆಸುವಂತಹ ಗೃಹಿಣಿಯ ಮನಸ್ಸಿನ ದೃಢತೆ, ಸಂಕಲ್ಪಗಳು ರಂಗೋಲಿಯಲ್ಲಿ ವ್ಯಕ್ತವಾಗುತ್ತದೆ. ಹಿಂದೆ ಅಕ್ಕಿಹಿಟ್ಟಿನಲ್ಲಿ ರಂಗೋಲಿ ಹಾಕುತ್ತಿದ್ದರು. ಇದರ ಮಹತ್ ಉದ್ದೇಶ ಬೀದಿ ಕಡೆ ನೆಲದ ಮೇಲೆ ಓಡಾಡುವ ಸಣ್ಣಪುಟ್ಟ ಹುಳುಗಳಿಗೆ ಅವು ಆಹಾರವಾಗುತ್ತಿತ್ತು. ಅದು ಮನೆಯ ಒಳಗೆ ಹುಳು, ಕ್ರಿಮಿಗಳು ಬಾರದಂತೆ ರಂಗೋಲಿಯು ತಡೆಯುತ್ತಿತ್ತು.

ಹಬ್ಬ, ಹರಿದಿನ ವಿಶೇಷಗಳಲ್ಲಿ ಮತ್ತು ದೇವರ ತೇರು ಬರುವ ರಥ ಬೀದಿ ಗಳಲ್ಲಿ ವಿಶೇಷ ಬಣ್ಣಗಳನ್ನು ಬಳಸಿ ಹಾಕುವ ದೊಡ್ಡ ದೊಡ್ಡ ರಂಗೋಲಿ ಗಳನ್ನು ನೋಡಿ ವಿಸ್ಮಯ ಆಗದಿರುವವರು ಇರಲಾರರು. ರಂಗೋಲಿಯನ್ನು ಶಾಸ್ತ್ರಕ್ಕನು ಗುಣವಾಗಿ ಪೂಜೆ, ಹೋಮ, ಹವನಗಳಲ್ಲೂ ಇಡುತ್ತಾರೆ. ಹೆಂಗೆಳೆಯರೇ ಅಲ್ಲದೆ ಪುರುಷರೂ ಕೆಲವರು ಸುಂದರವಾಗಿ ರಂಗೋಲಿ ಬಿಡಿಸುತ್ತಾರೆ. ಸಾಂಪ್ರದಾಯಿಕ ರಂಗೋಲಿಗಳು ಕಾಲಕಾಲಕ್ಕೆ ಬದಲಾಗಿ ಹೊಸ ಹೊಸ ವಿನ್ಯಾಸಗಳೊಂದಿಗೆ ಇಡುವುದು ಸಂತೋಷದ ವಿಷಯವಾಗಿದೆ.


ರಂಗೋಲಿಯಲ್ಲಿ ಬಳಸುವ ರಂಗು ಎಂದರೆ ಬಣ್ಣ. ಈ ಬಣ್ಣಗಳಲ್ಲೂ ಹಲವು ಮಹತ್ತ್ವಗಳಿವೆ. ಅವುಗಳಲ್ಲಿ ಕೆಲವನ್ನು ಹೀಗೆ ಹೇಳಬಹುದು. ಬಿಳಿಬಣ್ಣವು ಶುದ್ಧತೆ, ಶಾಂತಿ, ಜ್ಞಾನದ ಸಂಕೇತ. ಬಿಳಿ ಬಣ್ಣವಿಲ್ಲದೆ ರಂಗೋಲಿ ಪೂರ್ಣ ಎನಿಸುವುದಿಲ್ಲ. ಏಕೆಂದರೆ ಬಿಳಿಯಿಂದಲೇ ಎಲ್ಲಾ ಬಣ್ಣಗಳೂ ಬಂದಿರುವುದು. ಸೂರ್ಯನ ಕಿರಣದ ಬಿಳಿ ಬಣ್ಣದಿಂದಲೇ ಪ್ರಪಂಚದಲ್ಲಿನ ಏಳು ಬಣ್ಣಗಳೂ ಬಂದಿರುವುದು ಎಂದು ವೈಜ್ಞಾನಿಕವಾಗಿ ದೃಢಪಟ್ಟಿದೆ. ಕೆಂಪುಬಣ್ಣವು ಶಕ್ತಿ, ಬಲ, ಪ್ರೇಮದ ಸಂಕೇತ. ಭಗವಂತನ ಐಶ್ವರ್ಯಗಳಲ್ಲಿ ಶಕ್ತಿ, ಬಲಗಳೂ ಇವೆ. ಸಕಲ ಚರಾಚರಗಳನ್ನು ಪ್ರೇಮಿಸುವ ಭಾವವೇ ಭಕ್ತಿಯ ಪ್ರಾಕಟ್ಯ ಎನ್ನುವುದು. ಹಸಿರು ಬಣ್ಣವು ಸಮತ್ವ ಮತ್ತು ಹೊಂದಾಣಿಕೆಯ ಸಂಕೇತ. ಪ್ರಕೃತಿಯಲ್ಲಿನ ಗಿಡ, ಮರ, ಬಳ್ಳಿಗಳಲ್ಲಿ ಕಾಣುವ ವಿವಿಧ ರೀತಿಯ ಹಸಿರು ಮತ್ತು ಇದರ ಸಂಕೇತವನ್ನು ಬದುಕಿನಲ್ಲಿ ಅನುಸರಿಸುವುದು ಬಾಳಿನಲ್ಲಿ ಸಾರ್ಥಕತೆ ಕಾಣುವಂತೆ ಆಗುತ್ತದೆ. ನೀಲಿಬಣ್ಣವು ವಿಶಾಲತೆ, ಸಂತೋಷ, ಅಗಾಧತೆ ಹೇಳುತ್ತದೆ. ಆದ್ದರಿಂದ ಪ್ರಕೃತಿಯಲ್ಲಿ ಆಕಾಶ, ಸಮುದ್ರ ನೀಲಿ ಬಣ್ಣದಂತೆ ಕಾಣುತ್ತದೆ. ಇದನ್ನು ನೋಡಿ ಹೃದಯ ವೈಶಾಲ್ಯತೆಯನ್ನು ಬೆಳೆಸಿಕೊಂಡು, ಅದರ ಮೂಲಕ ಪ್ರತಿ ಮಾನವನ ಅಂತರ್ ಮತ್ತು ಬಾಹ್ಯ ಸೌಂದರ್ಯವನ್ನು ನೋಡುತ್ತಾ ಅಗಾಧ ಸಂತೋಷ ಅನುಭವಿಸಿದಾಗ ಧನಾತ್ಮಕ ಚಿಂತನೆ ಹೆಚ್ಚುತ್ತದೆ. ಹಳದಿ ಬಣ್ಣವು ಸಮೃದ್ಧತೆಯ ಸಂಕೇತ. ಹಿಂದು ಸಂಸ್ಕೃತಿ ಪ್ರಕಾರ ಹೆಂಗಸರು ಮಂಗಳ ದ್ರವ್ಯವಾಗಿ ಕುಂಕುಮದೊಂದಿಗೆ ಅರಿಶಿನವನ್ನೂ ಬಳಸುವುದು ರೂಢಿಯಲ್ಲಿದೆ. ಕೇಸರಿ ಬಣ್ಣವು ತ್ಯಾಗದ ಸಂಕೇತ. ಇದನ್ನು ನೋಡಿದ ತಕ್ಷಣ ನಮ್ಮ ಭಾರತ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡು ಹೋರಾಡಿದ ಮಹಿಮರು ನೆನಪಿಗೆ ಬರುತ್ತಾರೆ.

ಈ ಬಣ್ಣಗಳನ್ನೇ ಭಾರತದ ರಾಷ್ಟ್ರಧ್ವಜದಲ್ಲೂ ಬಳಸಿದ್ದಾರೆ. ಕೇಸರಿ, ಬಿಳಿ, ಹಸಿರು ಬಣ್ಣಗಳ ನಡುವೆ ನೀಲಿಚಕ್ರವನ್ನು ನೋಡಿದಾಗ ತ್ಯಾಗ, ಶಾಂತಿ, ಸಮತ್ವ ದೊಂದಿಗೆ ಹೃದಯ ವಿಶಾಲತೆ ಹೊಂದಿರುವ ಪ್ರತೀ ಭಾರತೀಯನ ಸಂಸ್ಕಾರ ಅವನ ಪ್ರೇಮಮಯ ರಕ್ತದಲ್ಲಿ ಸಮೃದ್ಧಿಯಾಗಿ ತುಂಬಿರುವುದರ ಅರಿವಾಗುತ್ತದೆ. ಅಂತಹ ಮಹತ್ ತತ್ತ್ವಗಳನ್ನು ಹೊಂದಿರುವ ರಾಷ್ಟ್ರಧ್ವಜವನ್ನು ಗೌರವಿಸಿ, ನಮಿಸುವುದು ನಮ್ಮಗಳ ಆದ್ಯಕರ್ತವ್ಯ. ಅದೇ ರೀತಿ ಭಾರತಮಾತೆಯ ಹೆಮ್ಮೆಯ ಪುತ್ರಿ ಕನ್ನಡಮ್ಮನ ಧ್ವಜದಲ್ಲೂ ಹಳದಿ ಮತ್ತು ಕೆಂಪು ಬಣ್ಣಗಳು ಸಮೃದ್ಧತೆ ಮತ್ತು ಪ್ರೇಮ ತುಂಬಿರುವ ಕನ್ನಡನಾಡು ಮತ್ತು ಕನ್ನಡಿಗನ ಪ್ರತೀಕವಾಗಿದೆ.

ರಂಗೋಲಿ ಕಲೆಯನ್ನು ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲೂ ಪ್ರದರ್ಶಿಸಿದ್ದಾರೆ. ಈ ಕಲೆಯು ಭಾರತ ದೇಶದಲ್ಲಿ ಪೂರ್ವದಿಂದ ಇಂದಿನವರೆಗೆ ಪರಂಪರಾನುಗತವಾಗಿ ಮನೆಯ ಹಿರಿಯ ಅಜ್ಜಿ, ತಾಯಿ, ಮತ್ತು ಮೊಮ್ಮಗಳು ಇಡುವುದರೊಂದಿಗೆ ಜೀವಂತವಾಗಿದೆ. ಇನ್ನೂ ಮುಂದೆ ಇದು ಪರಂಪರೆ ಜೀವಂತವಾಗಿರುವುದು ನಮ್ಮಗಳ ಮತ್ತು ಮುಂದಿನ ಪೀಳಿಗೆಯ ಕೈಲಿದೆ. ಇಂದಿನ ಬಹುಮಹಡಿ ಕಟ್ಟಡದಲ್ಲಿನ ವಾಸ, ಬಿಡುವಿಲ್ಲದ ಹೆಂಗಸರ ದಿನಚರಿ, ರಂಗೋಲಿಯಲ್ಲಿ ಆಸಕ್ತಿ ಕಡಿಮೆ ಆಗುತ್ತಿರುವುದು ಮತ್ತು ಮಾರುಕಟ್ಟೆಯಲ್ಲಿ ಸಿಗುವ ಸಿದ್ಧ ರಂಗೋಲಿಗಳನ್ನು ಅಲಂಕಾರಿಕವಾಗಿ ಬಳಸುತ್ತಿರುವಾಗ ಕೈಯಿಂದ ಇಡುವ ರಂಗೋಲಿ ಕಲೆಯು ನಶಿಸುವುದೋ ಎಂದೆನಿಸಿದರೂ, ಕೆಲವೆಡೆ ಇದನ್ನು ಉತ್ತೇಜಿಸಲೆಂದು ಸಂಘ, ಸಂಸ್ಥೆಗಳು ಆಯೋಜಿಸುವ ರಂಗೋಲಿ ಸ್ಪರ್ಧೆಗಳು ಪ್ರದರ್ಶನಗಳು ಮತ್ತು ಮನೆಗಳಲ್ಲಿ ವಿಶೇಷ ದಿನಗಳಲ್ಲಿ ಬಿಡಿಸುವ ರಂಗೋಲಿ ಗಳನ್ನು ನೋಡುವುದರಿಂದ ಕಿರಿಯರಲ್ಲಿ ಹುದುಗಿರುವ ಕಲೆ ಈಚೆ ಬರುವುದರಲ್ಲಿ ಸಂದೇಹ ಇಲ್ಲ. ಕಲೆಗಳಿಗೆ ಎಂದೆಂದಿಗೂ ಕೊನೆ ಎಂಬುದಿರುವುದಿಲ್ಲ. ಸುಪ್ತವಾದ ಕಲೆಗಳು ಹೊರ ಹೊಮ್ಮುವುದಕ್ಕೆ ನಾವು ವೇದಿಕೆ ಏರ್ಪಡಿಸಿಕೊಡಬೇಕು.



■ ಲಲಿತಾ ರಮೇಶ್



## ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ



ಬೃಹಚ್ಚರಣ ಸಂಘವು ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ ತಾ.25.12.14ರಂದು ಭೂ–ನೀಳಾ ಸಮೇತ ಶ್ರೀನಿವಾಸ ಕಲ್ಯಾಣೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ದೇವಾಲಯದಿಂದ ಕಲ್ಯಾಣ ಮಂಟಪಕ್ಕೆ ಉತ್ಸವಮೂರ್ತಿಯನ್ನು ಮೆರವಣಿಗೆಯಲ್ಲಿ ಕರೆತರಲಾಯಿತು. ನಮ್ಮ ಸಮುದಾಯದ 50 ದಂಪತಿಗಳು ಕಲ್ಯಾಣೋತ್ಸವದಲ್ಲಿ ಪಾಲ್ಗೊಂಡರು. ದಂಪತಿಗಳಿಗೆ ಪೂಜಾ ದ್ರವ್ಯದೊಂದಿಗೆ ದೇವರ ಭಾವಚಿತ್ರ, ಅಂಗವಸ್ತ್ರವನ್ನು ಸಂಘದಿಂದ ನೀಡಲಾಗಿತ್ತು. 45 ಸಾವಿರ ರೂ. ವೆಚ್ಚದಲ್ಲಿ ಸಂಘದ ಸದಸ್ಯರು ಹಾಗೂ ದಾನಿಗಳು ನೀಡಿದ ದೇಣಿಗೆಯಿಂದ, ದೇವರಿಗೆ ಬೆಳ್ಳಿ ಕಿರೀಟಗಳನ್ನು ಅರ್ಪಿಸಲಾಯಿತು. ವೇ.ಬ್ರ. ಶ್ರೀ ನಂಜುಂಡ ದೀಕ್ಷಿತರು, ಶ್ರೀ ಸೂರ್ಯ ನಾರಾಯಣ ದೀಕ್ಷಿತರು ಹಾಗೂ ಇತರ ಆಗಮಿಕರ ನೇತೃತ್ವದಲ್ಲಿ ಕಲ್ಯಾಣ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು. ಮಹಾ ಪ್ರಸಾದ, ಭೋಜನದೊಂದಿಗೆ ಮುಕ್ತಾಯವಾಯಿತು.

**ಕಲ್ಯಾಣೋತ್ಸವ ಸೇವಾಕರ್ತರು : ಶ್ರೀಯುತರಾದ,**

| | |
|---|---|
| ಲಕ್ಷ್ಮಿ ನಾರಾಯಣ್ ಕೆ ಆರ್ | ಸೂರ್ಯನಾರಾಯಣ ಬಿಎಸ್ |
| ಚಂದ್ರಶೇಖರಯ್ಯ ಎನ್ | ಕೃಷ್ಣ ಭಾರತಿ ದಾಸ್ |
| ನಿರಂಜನ್ ಎಸ್ | ಕೃಷ್ಣಸ್ವಾಮಿ ಛಾಯಾಪತಿ |
| ಸ್ವಾಮಿನಾಥನ್ ಆರ್ ಎನ್ | ವೆಂಕಟೇಶ್ ಜಿ ಎಸ್ |
| ಶ್ರೀಕಂಠೇಶ್ವರ್ ಕೆ | ಸತ್ಯನಾರಾಯಣ ಬಿ ಸಿ |
| ರಮೇಶ್ ಎನ್ | ಸತ್ಯನಾರಾಯಣ ಎಸ್ |
| ಗೋವಿಂದ ರಾವ್ ಡಿ. | ರವಿಶಂಕರ್ ಎಮ್ ಆರ್ |
| ವೆಂಕಟೇಶ್ ಆರ್ ಎಸ್ | ರವಿಶಂಕರ್ ಆರ್ ಪಿ |
| ಸುಬ್ಬರಾವ್ | ಕಲ್ಯಾಣರಾಮನ್ ಚಂದ್ರಶೇಖರ್ |
| ಅಶ್ವತ್ಥ್ ಎನ್ | ಈಶ್ವರ ಮೂರ್ತಿ ಬಿ ಎ |
| ಭಾಸ್ಕರ್ ಡಿ ಎಸ್ | ಸತ್ಯಮೂರ್ತಿ ಜಿ ಎಸ್ |
| ಜಯರಾಮ್ ಎಸ್ | ಶ್ರೀನಿವಾಸಯ್ಯ ಎಸ್ |
| ರಾಮಕೃಷ್ಣ ವಿ | ಮಾನಸ ಅರವಿಂದ್ |
| ರಮೇಶ್ ಟಿ ಎಸ್ | ಸಂಜಯ್ ರಾಜಾಪುರ |
| ಭಗವಾನ್ ಆರ್ | ರವಿಕುಮಾರ್ ಆರ್ ಎಸ್ |
| ಮೀನಾಕ್ಷಿ | ರಘುನಂದನ್ ಎಸ್ |
| ಸುಮ ಗೋಪಾಲ್ | ಶ್ರೀನಿವಾಸನ್ ಎಸ್ |
| ಬದರಿ ನಾರಾಯಣ್ ಹೆಚ್ ಆರ್ | ಈಶ್ವರನ್ ಎ |
| ಆತ್ರೇಶಾ | ರಮೇಶ್ ಆರ್ ಎಸ್ |
| ಡಾ॥ ಸ್ವಾಮಿನಾಥನ್ ಜಿ | ಶೇಖರ್ ಕೆ ಸಿ |
| ನಾಗರಾಜ್ ಎನ್ | ಸರಸ್ವತಿ ನಾಗರಾಜ್ |
| ರೇಖಾ ರಮೇಶ್ | ರವಿ ವೀಣಾ |
| ಶ್ರೀನಿವಾಸ ಎಸ್ ಸಿ | ವೆಂಕಟರಾಮನ್ ಎಸ್ ಆರ್ |
| ರವೀಂದ್ರ ಆರ್ | ಅರುಣ್ ವೆಂಕಟಾಚಲಯ್ಯ |
| ರವಿಕುಮಾರ್ ಎಸ್ | ವಿಮಲ ಬಾಯಿ ಶ್ರೀನಿವಾಸ ಮೂರ್ತಿ |



## ಸುದ್ದಿ ಮನೆ

### ಶುಭ ವಿವಾಹ

ಸಂಘದ ಸದಸ್ಯ ಶ್ರೀ ಪಿ. ಸುಂದರನ್ ಹಾಗೂ ಶ್ರೀಮತಿ ಸುನೀತಾ ದಂಪತಿಗಳ ಪುತ್ರ ಚಿ. ಸುಮಂತ್‌ರವರ ವಿವಾಹ ಚಿ.ಸೌ. ನಿಮಿಷ ರವರೊಂದಿಗೆ ದಿ. 30.10.14ರಂದು ಬೆಂಗಳೂರಿನಲ್ಲಿ ನೆರವೇರಿತು.

✦ ✦

ಸಂಘದ ಸದಸ್ಯ ಶ್ರೀ ಡಿ.ಕೆ. ಶೇಷಗಿರಯ್ಯ ಹಾಗೂ ಶ್ರೀಮತಿ ನಾಗರತ್ನ ದಂಪತಿಗಳ ಪುತ್ರ ಚಿ.ಎಸ್. ಕೃಷ್ಣರವರ ವಿವಾಹ ಚಿ.ಸೌ. ಸೀತಾಲಕ್ಷ್ಮೀಯವರೊಂದಿಗೆ ದಿ. 7.9.14ರಂದು ಗಾಯತ್ರಿಭವನದಲ್ಲಿ ನೆರವೇರಿತು.

✦ ✦

ಸಂಘದ ಸದಸ್ಯ ಶ್ರೀ ಎಸ್.ಆರ್. ಬಾಲಸುಬ್ರಮಣ್ಯಂ ಹಾಗೂ ಶ್ರೀಮತಿ ಶ್ರೀದೇವಿ ದಂಪತಿಗಳ ಪುತ್ರ ಚಿ. ಸಂದೀಪ್‌ರವರ ವಿವಾಹ ಚಿ.ಸೌ. ಸ್ಫೂರ್ತಿಯವರೊಂದಿಗೆ ದಿ. 1.12.14ರಂದು ಮೈಸೂರಿನಲ್ಲಿ ನೆರವೇರಿತು.

✦ ✦

ಸಂಘದ ಸದಸ್ಯ ಶ್ರೀ ಸಿ. ವೆಂಕಟೇಶ್ ಹಾಗೂ ಶ್ರೀಮತಿ ವೀಣಾ ದಂಪತಿಗಳು ತಮ್ಮ ಪುತ್ರಿ ಚಿ॥ಸೌ॥ ವರ್ಷಾ ವಿವಾಹವನ್ನು ಚಿ.ರಾ. ಅಜಯ್‌ರವರೊಂದಿಗೆ ದಿನಾಂಕ: 2.11.2014ರಂದು ಬೆಂಗಳೂರಿನಲ್ಲಿ ನೆರವೇರಿಸಿದರು.

**ಬೃಹಚ್ಚರಣ ಸಂಘವು ಎಲ್ಲಾ ನವದಂಪತಿಗಳಿಗೆ ಶುಭ ಹಾರೈಸುತ್ತದೆ.**

ಸಂಘದ ಸದಸ್ಯ ಶ್ರೀ ರಾಮನ್ ರಮೇಶ್ ಹಾಗೂ ಶ್ರೀಮತಿ ಪದ್ಮ ರಮೇಶ್‌ರವರಿಗೆ 30.12.14ರಂದು ಅಮೆರಿಕಾದಲ್ಲಿ ಮೊಮ್ಮಗಳು ಜನಿಸಿದ ಸಂದರ್ಭದಲ್ಲಿ ಸಂಘ ಮಗುವಿಗೆ ಶುಭಹಾರೈಸುತ್ತದೆ.



ಶ್ರೀಮತಿ ಪದ್ಮಾವತಮ್ಮ ಕೃಷ್ಣಮೂರ್ತಿಯವರ ಶತಮಾನೋತ್ಸವ ಸಂದರ್ಭದಲ್ಲಿ ಅವರ ಕುಟುಂಬ ವರ್ಗವು ಸಂಘಕ್ಕೆ ಹತ್ತು ಸಾವಿರ ರೂಪಾಯಿಗಳ ದೇಣಿಗೆ ನೀಡಿರುವುದಕ್ಕೆ ಶ್ರೀ ರಾಜಾಪುರ ಭಗವಾನ್ ಮತ್ತು ಕುಟುಂಬ ಸದಸ್ಯರಿಗೆ ಕಾರ್ಯಕಾರಿ ಸಮಿತಿ ಅಭಿನಂದಿಸುತ್ತಾ ಶುಭ ಕೋರುತ್ತದೆ.

ಕಿತ್ತಿಗಾನಹಳ್ಳಿಯ ಶ್ರೀ ಆರ್.ಎಸ್. ವೆಂಕಟಗಿರಿಯಪ್ಪನವರು ಸ್ವಪ್ರೇರಣೆಯಿಂದ ನಮ್ಮ ಬೃಹಚ್ಚರಣ ಸಂಘಕ್ಕೆ ಮಹಾ ಪೋಷಕರಾಗಿದ್ದಾರೆ. ಈ ಸಂದರ್ಭದಲ್ಲಿ ಸಂಘವು ಶ್ರೀಯುತರಿಗೆ ಧನ್ಯವಾದಗಳನ್ನು ಅರ್ಪಿಸುತ್ತದೆ.



# ನೆನಪಿನಂಗಳದಿಂದ ಛಾಯಾಚಿತ್ರ ೧೯ ಮತ್ತು ೨೦



ಬಿನ್ನಮಂಗಲ ರಾಧಾಕೃಷ್ಣರವರ ಪುತ್ರಿ ಆಶಾ ಮತ್ತು ಅನಂತರ ವಿವಾಹ ಸಮಾರಂಭ, 1976 (ಸಂಗ್ರಹ : ಬಿ.ಪಿ.ಸರಸ್ವತಿ)



ಗೌರಮ್ಮ–ಕೃಷ್ಣಮೂರ್ತಿ ಮದುವೆ ಸಮಾರಂಭ, 1948, (ಸಂಗ್ರಹ : ಜಿ.ಎಸ್. ಸತ್ಯಮೂರ್ತಿ)

## ಅವರೇಕಾಯಿ ಕಾಲು ವಂದದೆ



ಪಳೇ ಕಾಲ್ತೀಲ್ವಾಳ್ಕು ಅತ್ತೀ ರುಚಿ ನನ್ನೇ ಗೊತ್ತದೆ. ಇಂದ್ ಕಾಲ್ತೀ ಹೈದಕ್ಕಳ್ಕು ಅತ್ತೀ ಬಗ್ಗೆ ಕೊಂಚು ಇಷ್ಟು ಕಮ್ಮೀನೇ. ಅವ ಅದೋದೋ ಪಿಝಾ, ಬರ್ಗರ್ ಇನ್ನೂ ಓದೋದೋ ತಿನ್ನಾಕ್ರ, ಒಪ್ಪೋದೋ ಹಾತ್ಲೆ ಅವ್ರೇಕಾಯ್ ದು ಓದಾನ ಪಣ್ಕಾ ಬಲವಂತ್ಮೆ ತಿಂಗ್ರಾಳ್ದೆ ಅತ್ನಿಯೇ.

ಅದು ಅಲ್ಲಾದೆ, ಇಪ್ಪೋಯಲ್ಲಾ ಅತ್ತೆ ದಿನುಮೂ ತಿನ್ನಾ ವಡಂಬ್ಲೂ ಆಗಡ್ಲೇ ಅನ್ನಾಕ್ರ. ಅವರೇ ಕಾಯಿ ಉಪ್ಮಾವು, ತಪ್ಪಲ್ರೊಟ್ಟಿ, ಅವರ್ಕಡುಬು, ಹಿದ್ಕಿನ್ದ್ ಕೂಟು, ಉಂಡು ಕೊಳುಂಬು, ಕಾಳು ಚುಂಡ್ಲು ಚಾರು, ತೊವ್ವೇ.....!!! ಇನ್ನು ಅವರೇಕಾಯಿ "ಕ್ವಾಡ್ಬಳೆ" (ಕೋಡುಬಳೆ) ಆಹಾ!! ಕೋಕುದ್ದೇ ವಾಂಡಾ. ವಾಯ್ಲೇ ನೀರುಊರಾಕುದ್ದು. ಹೈದಕ್ಕಳ್ಕು ಕೊಲ್ಲೇಲೇ (ಹೊಲದಲ್ಲಿ) ಅದು ಒಪ್ಪಡಿ ಒಳಗಿದ್ದು, ಅವರೇಕಾಯಿ 'ಚಡಿ' (ಗಿಡ) ಒಪ್ಪಡಿ ಇರ್ಕುದ್ದೇ ಅನ್ನು ಗೊತ್ತಿಲ್ಲೇ ಪಾವು, ಚಡಿಯೇ ಪಾತೂ ಇರ್ಕುದ್ದ್ಲ....!!! ಅದಕೂ ಅನ್ನುಟ್ಟು ಕೊಲ್ಲೇಕಿ ಪೋಯಿ, ಫೋಟೋ ವಾಂಕುಂಡ್ವಂದಿ. ಅಪ್ಪಿಡಿಯಾನ ಹೈದಕ್ಕು ಪಾರ್ಕುಡು ಅನ್ನುಟ್ಟು. ಉಂಗುಳ್ದೇ ಹಾತ್ಲೆ ಅವರ್ಕಡ್ಬೋ, ಕೋಡ್ಬಳೇನೋ, ತಪ್ಪಲ್ರೊಟ್ಟೀನೋ ಪಣ್ಣಾ, ಅಳಿಯಂಗೋ, ತಪ್ಪೀಕಾದೇ ವರುಂದೇ.

ನಲ್ಲಾಗ್ಗು, ವರಾಕ್ರೀ. ಎಲ್ಲಾರ್ಕು ನಮಸ್ಕಾರುಂಗು.

ವಿ.ಎಸ್. ಮಣಿ, ಕಿತ್ತಿಗಾನಹಳ್ಳಿ

## ಅಡುಗೆ ಕಟ್ಟೆ

## ದಿಢೀರ್ ಹುಳಿ ಅವಲಕ್ಕಿ

**ಬೇಕಾಗುವ ಸಾಮಾನು:**

2 ಲೋಟಗಟ್ಟಿ ಅವಲಕ್ಕಿ, ಹುಣಸೆಹಣ್ಣು 11/2 ಹಿಡಿ ಉದ್ದಿನಬೇಳೆ, 11/2 ಹಿಡಿ ಕಡಲೆಬೇಳೆ, 1 ಹಿಡಿ ಕೊತ್ತಂಬರಿ ಬೀಜ, ಬ್ಯಾಡಗಿ ಮೆಣಸಿನ ಕಾಯಿ, (ಖಾರಕ್ಕೆ ತಕ್ಕಷ್ಟು) ರುಚಿಗೆ ತಕ್ಕಷ್ಟು ಉಪ್ಪು

**ಮಾಡುವ ವಿಧಾನ:**

ಅವಲಕ್ಕಿಯನ್ನು ಮಿಕ್ಸಿಯಲ್ಲಿ ತರಿಯಾಗಿ ರುಬ್ಬಿಕೊಳ್ಳಿ ಉದ್ದಿನಬೇಳೆ, ಕಡಳೆಬೇಳೆ, ಕೊತ್ತಂಬರಿಬೀಜ, ಮೆಣಸಿನಕಾಯಿ ಇವುಗಳನ್ನು ಹುರಿದು (ಎಣ್ಣೆ ಹಾಕಿ) ಹುಣಸೆಹಣ್ಣಿನ ಜತೆಗೆ ಪುಡಿಮಾಡಿಡಿ. ನಂತರ ಬಾಣಲೆಗೆ ಎಣ್ಣೆ ಹಾಕಿ, ಸಾಸಿವೆ, ಉದ್ದಿನಬೇಳೆ, ಕರಿಬೇವಿನ ಸೊಪ್ಪು ಹಾಕಿ ಒಗ್ಗರಣೆ ಮಾಡಿ ನಂತರ ಒಲೆ ಆರಿಸಿ ಪುಡಿ ಮಾಡಿದ ಅವಲಕ್ಕಿ ಹಾಗೂ ಮಸಾಲೆ ಸಾಮಗ್ರಿಗಳನ್ನು ಬೆರೆಸಿ. ಮುಚ್ಚಿಡಿ ಚೆನ್ನಾಗಿ ಆರಿದ ಮೇಲೆ ಡಬ್ಬದಲ್ಲಿ ಮುಚ್ಚಿಡಿ. ತಿನ್ನಲು ಬೇಕಾದಾಗ ಪಾತ್ರೆಯಲ್ಲಿ ಈ ಸಿದ್ಧವಾದ ಪುಡಿಯನ್ನು ಹಾಕಿ, ನೀರು ಸಿಂಪಡಿಸಿ ಹತ್ತು ನಿಮಿಷ ಮುಚ್ಚಿಡಿ, ನಂತರ ಚೆನ್ನಾಗಿ ಪುಡಿಯನ್ನು ಕೆದಕಿದರೆ ತಿನ್ನಲು ರುಚಿಯಾದ ಹುಳಿ ಅವಲಕ್ಕಿ ಸಿದ್ಧ.

## ಕೋಸಿನ ಪಕೋಡ

ಈರುಳ್ಳಿ, ಕೋಸು, ಹಸಿಮೆಣಸಿನಕಾಯಿ, ಶುಂಠಿ, ಬೆಳ್ಳುಳ್ಳಿ ಪೇಸ್ಟ್, ಕೊತ್ತಂಬರಿ, ಕರಿಬೇವು, ಪುದಿನ ಹಾಕಿ ಎಣ್ಣೆಹಾಕಿ + ಉಪ್ಪುಹಾಕಿ ಚೆನ್ನಾಗಿ ಕಲೆಸಿ, 2 ಸ್ಪೂನ್ ಅಕ್ಕಿಹಿಟ್ಟು ಬೇಕಾದಷ್ಟು ಕಡಲೆಹಿಟ್ಟು, ಕಾದ ಎಣ್ಣೆ ಹಾಕಿ ಕಲಸಿ, ಕಾದ ಎಣ್ಣೆಯಲ್ಲಿ ಕರಿಯುವುದು. ಎಣ್ಣೆ ಜಾಸ್ತಿ ಆದರೆ ಸ್ವಲ್ಪ ಮೈದಾ ಕಲೆಸಿಕೊಳ್ಳಬಹುದು.

■ ಕೆ.ಎಲ್. ಶಾಂತ



## ಮಕ್ಕಳಿಗಾಗಿ ರಾಮಾಯಣ



ಹೆಚ್.ಪಿ. ರಾಮಕೃಷ್ಣ

ತಂದೆಯ ಮಾತನು ಪಾಲಿಸಲು। ಕಾಡಿಗೆ ಹೊರಟನು ಶ್ರೀರಾಮ ।
ಜೊತೆಯಲಿ ಇದ್ದನು ಲಕ್ಷ್ಮಣ। ಮೊದಲು ಅಣ್ಣನ ರಕ್ಷಣ ।
ಸೀತೆಯ ಜೊತೆಯಲಿ ಶ್ರೀರಾಮ। ಕಾಡಿನಲ್ಲಿದ್ದನು ಆರಾಮ ।
ಆಯಿತು ಸೀತೆಯ ಅಪಹರಣ। ಕಾರಣ ಲಂಕಾಧಿಪತಿ ರಾವಣ ।
ಲಕ್ಷ್ಮಣ ರಾಮನ ತಮ್ಮ। ರಾಮನ ಭಂಟನು ಹನುಮ ।
ಹನುಮನು ಹಾರಿದ ಲಂಕೆಗೆ। ಕಂಡನು ಸೀತೆಯ ವನದೊಳಗೆ ।
ಕೊಟ್ಟನು ರಾಮನ ಉಂಗುರವ। ಪಡೆದನು ಸೀತೆಯ ಚೂಡಾಮಣಿಯ ।
ಹನುಮನ ಬಾಲಕೆ ಬೆಂಕಿ। ಲಂಕೆಯ ಸುಟ್ಟಿತು ಮಂಕಿ ।
ಕಿಷ್ಕಿಂದೆಗೆ ಬಂದನು ಹನುಮ। ವಿಷಯವ ತಿಳಿದನು ಶ್ರೀರಾಮ ।
ರಾಮನು ಹೊರಟನು ಲಂಕೆಗೆ। ಅಪಾರ ಕಪಿಸೇನೆಯೊಂದಿಗೆ ।
ಕಪಿಗಳು ಕಟ್ಟಿತು ಸೇತುವೆಯ। ರಾಮನು ದಾಟಿದ ಆ ಶರಧಿಯ ।
ಶರಣಾಗಿ ಬಂದನು ವಿಭೀಷಣ। ಯುದ್ಧಕೆ ನಿಂತನು ಆ ರಾವಣ ।
ರಾಮನು ಬಿಟ್ಟ ಬಾಣ। ತೆಗೆಯಿತು ರಾವಣನ ಪ್ರಾಣ ।
ರಾಮನ ಕಥೆಯೇ ರಾಮಾಯಣ। ಮಾಡೋಣ ನಿತ್ಯ ಪಾರಾಯಣ ॥



# ಚಿಣ್ಣರ ಅಂಗಳ

## ನೀತಿ ಕಥೆ

ಅದೊಂದು ಕಾಡು ಪ್ರದೇಶದ ಹಳ್ಳಿ. ಅಲ್ಲಿ ಇವನೊಬ್ಬ ನಾಟಿ-ವೈದ್ಯ. ಕಾಡಿನಲ್ಲಿ ಹೇರಳವಾಗಿ ದೊರೆಯುವ ಗಿಡಮೂಲಿಕೆಗಳಿಂದ ತಾನೆ ಖುದ್ದಾಗಿ ಔಷಧಿಯನ್ನು ತಯಾರಿಸುತ್ತಿದ್ದ. ಸುತ್ತ ಮುತ್ತಲಿನ. ಹಳ್ಳಿಯವರು ಎಲ್ಲತರಹದ ಚಿಕಿತ್ಸೆಗಾಗಿ ಇವನಲ್ಲಿಗೇ ಬರಬೇಕಿತ್ತು. ಯಾವುದೇ ವೇಳೆಯಲ್ಲಿ ಬಂದರೂ ಬೇಸರವಿಲ್ಲದೆ ಉಪಚರಿಸುತ್ತಿದ್ದ. ಆದರೆ ತುಂಬಾ "ಜಿಪುಣ" ಯಾರಿಗೂ ಉಚಿತವಾಗಿ ಚಿಕಿತ್ಸೆ ನೀಡುತ್ತಿರಲಿಲ್ಲ. ಸಾಕಷ್ಟು ಹಣ,ಸಂಪತ್ತು ಕೂಡಿಟ್ಟಿದ್ದ. ಗಳಿಸಿದ ಸಂಪತ್ತನ್ನು ತಾನೂ ಅನುಭವಿಸದೆ, ದಾನ ಧರ್ಮಗಳಿಗೂ ನೀಡದೆ, ದೂರ ಉಳಿದಿದ್ದ.

ಸುತ್ತ ಮುತ್ತಲಿನವರ, ಸ್ನೇಹಿತರ, ನೆಂಟರ ಮನೆಯ ಯಾವುದೇ ಶುಭ ಕಾರ್ಯಕ್ರಮಕ್ಕೂ ತಪ್ಪದೇ ಹಾಜರಾಗುತ್ತಿದ್ದ. ತಾನೆಂದು ಯಾವುದೇ ಅಂತಹ ಶುಭ ಕಾರ್ಯಕ್ರಮ ಏರ್ಪಡಿಸಿ ನಾಲ್ಕಾರು ಜನರನ್ನು ಆಹ್ವಾನಿಸಿ ಅನ್ನ ಹಾಕುವ ಗೋಜಿಗೆ ಹೋದವನಲ್ಲ.

ಅನೇಕ ಸಂದರ್ಭಗಳಲ್ಲಿ ಸ್ನೇಹಿತರು, ನೆಂಟರು ಇವನ ಜಿಪುಣತನದ ಬಗ್ಗೆ ಗೇಲಿ ಮಾಡಿದಾಗ. "ತನಗೆ ಸಂತಾನವಿಲ್ಲದ ಕಾರಣ, ತಾನುಗಳಿಸಿದ ಸಂಪತ್ತನ್ನೆಲ್ಲಾ ಪೂರ್ತಿಯಾಗಿ ತನ್ನ ಹಾಗೂ ಪತ್ನಿಯ ಮರಣದ ನಂತರ ದಾನಧರ್ಮದ ಕಾರ್ಯಗಳಿಗಾಗಿ ಮೀಸಲಿಡುತ್ತೇನೆ ಎಂದು ಹೇಳಿಕೊಳ್ಳುತ್ತಿದ್ದ".

ಒಂದು ದಿನ ಗಿಡಮೂಲಿಕೆಗಳಿಗಾಗಿ ಕಾಡಿಗೆ ಹೋಗಿದ್ದಾಗ. ಜೋರಾದ ಮಳೆ ಬಂದ ಕಾರಣ ಅಲ್ಲೇ ಇದ್ದ ಮರದ ಕೆಳಗೆ ನಿಂತು ಕೊಂಡ. ಆ ಮರದ ಮತ್ತೊಂದು ಕಡೆ ಒಂದು ಹಸು ಮತ್ತು ಒಂದು ಹಂದಿ ಏನೋ ಮಾತನಾಡಿಕೊಳ್ಳುತ್ತಿರುವುದನ್ನು ಗಮನಿಸಿದ.

**ಹಂದಿ :** "ನಾವಿಬ್ಬರೂ ಪ್ರಾಣಿಗಳೇ ಜನ ಇಬ್ಬರನ್ನೂ ಸಾಕುತ್ತಾರೆ, ಆದರೆ ನಿನ್ನನ್ನು ಮಾತ್ರ ಪೂಜಿಸುತ್ತಾರೆ, ಗೌರವಿಸುತ್ತಾರೆ. ನನ್ನನ್ನು ಹಂಗಿಸಿ ಕೀಳಾಗಿ ಕಾಣುತ್ತಾರೆ. ನಮ್ಮಿಬ್ಬರ ಮಾಂಸವನ್ನು ಜನರು ಆಹಾರವಾಗಿ ಉಪಯೋಗಿಸುತ್ತಾರೆ. ಹಾಗಿದ್ದಲ್ಲಿ ಈ ತಾರತಮ್ಯ ಏಕೆ...?

**ಹಸು :** "ಮೊದಲಿಗೆ ನಿನ್ನ ಬದುಕು ಹೊಲಸು, ನೀನು ತಿನ್ನುವುದೂ ಹೊಲಸು" ನಿನ್ನನ್ನು ಸಾಕುವುದೇ ಕೊಲ್ಲುವುದಕ್ಕಾಗಿ. ನಿನ್ನ ಉಪಯೋಗ ಏನಿದ್ದರೂ, ನೀನು ಸತ್ತಮೇಲೆ ಮಾಂಸಕ್ಕೆ ಮಾತ್ರ. ಬದುಕಿದ್ದಾಗ ನಿನ್ನಿಂದ ಯಾವುದೇ ಉಪಯೋಗವಿಲ್ಲ. ನನ್ನ ಬದುಕು ಹಾಗಲ್ಲ. ನಾನು ಬದುಕಿದ್ದಾಗ 'ಹಾಲು' ಕೊಡುತ್ತೇನೆ, ನನ್ನ ಸಗಣಿ, ಗಂಜಲ ಎಲ್ಲವೂ ಉಪಯೋಗ, ಅನೇಕ ರೀತಿಯಲ್ಲಿ ನನ್ನ ಮಾಲೀಕನಿಗಾಗಿ ದುಡಿಯುತ್ತೇನೆ. ನಾನು ಸತ್ತ ನಂತರ ಕೇವಲ ಸ್ವಲ್ಪ ಮಾತ್ರವೇ ಮಾಂಸಕ್ಕಾಗಿ ಉಪಯೋಗ. ಹಾಗಾಗಿ, ನಾನು 'ಬದುಕಿದ್ದಾಗ' ಜನರಿಗೆ ಹೆಚ್ಚು ಉಪಕಾರಿ!

ಇದನ್ನು ಕೇಳಿಸಿಕೊಂಡ ವೈದ್ಯ ಆಲೋಚಿಸಿದ. ನಾನು ಯಾರಿಗಾಗಿ ಹಾಗೂ ಏತಕ್ಕಾಗಿ ಹಣ, ಆಸ್ತಿ, ಸಂಪತ್ತನ್ನು ಕೂಡಿಡಲಿ? ನನ್ನ ಜೀವನ ಹೊಲಸು ಹಂದಿಯಂತಾಗದೆ, ಉತ್ತಮ ಹಸುವಿನ ಜೀವನದಂತಿರಬೇಕು. ನಾನು ಗಳಿಸಿದ್ದರಲ್ಲಿನ ಸ್ವಲ್ಪ ಭಾಗವನ್ನಾದರೂ ನನ್ನ ಕೈಯಿಂದ ಬದುಕಿರುವಾಗಲೇ ದಾನ ಮಾಡಬೇಕು ಅದರ ಉಪಯೋಗವನ್ನು ನೋಡಿ ತೃಪ್ತಿ, ಆನಂದ ಪಡಬೇಕು ಎಂದು ನಿರ್ಧರಿಸಿದ.


**ನೀತಿ ಪಾಠ**

ನಾವು ಗಳಿಸಿದ್ದೆಲ್ಲವೂ ಈ ಸಮಾಜದಿಂದ ಎಂದು ನಾವು ಬದುಕಿದ್ದಾಗ, ನಮ್ಮಲ್ಲಿರುವ ಸ್ವಲ್ಪ ಭಾಗವನ್ನು ಸಮಾಜದ ಉತ್ತಮ ಕಾರ್ಯಗಳಿಗೆ ನೀಡಿ ಸಂತೋಷ ಪಡಬೇಕು, ಅದರ ಉಪಯೋಗವನ್ನು ನೋಡಿ, ಅನುಭವಿಸಿ ಆನಂದ ಪಡಬೇಕು.

ಸತ್ತನಂತರ ಕೂಡಿಟ್ಟ ಹಣ, ಆಸ್ತಿ, ಸಂಪತ್ತು ಯಾರಪಾಲೋ...?

ಹೇಗೋ.....?, ಏನೋ.......?


ನಾವು ನೋಡಲು ಅಸಾಧ್ಯ ಅಲ್ಲವೇ? ಕೊಟ್ಟಿದ್ದು ತನಗೆ, ಕೂಡಿಟ್ಟದ್ದು ಪರರಿಗೆ. ಹಾಗಾಗಿ, ನಾವು ಬದುಕಿರುವಾಗ ಗಳಿಸಿದ್ದನ್ನು – ಬಳಸಿ, ಉಳಿಸಿ ಮತ್ತು ಸಮಾಜದ ಒಳಿತಿಗಾಗಿ ನೀಡಿ ಧನ್ಯರಾಗೋಣ. ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳೋಣ.



■ವಿ.ಎಸ್.ಮಣಿ
98450 55582

## ವ್ಯತ್ಯಾಸ ಕಂಡು ಹಿಡಿಯಿರಿ

■ ಗೋವಿಂದರಾವ್ ಡಿ.



# ನಮ್ಮ ಯುವ ಜನಾಂಗದಲ್ಲೊಂದು ಮಾಣಿಕ್ಯ



ಕಾಚರಕನಹಳ್ಳಿ ದಿ॥ ಭೀಮಶರ್ಮ ಅವರ ಮೊಮ್ಮಗ, ಶ್ರೀ ಸುಬ್ರಹ್ಮಣ್ಯ ಶರ್ಮ ದಂಪತಿಗಳ ಪುತ್ರ ಶ್ರೀ ಭರತ್‌ಶರ್ಮ ನಮ್ಮ ಬೃಹಚ್ಚರಣ ಸಮುದಾಯವೇ ಹೆಮ್ಮೆಪಡಬಹುದಾದ ಅನರ್ಘ್ಯ ರತ್ನ. ಈತನ ಅತ್ಯಂತ ಶ್ರೇಷ್ಠವಾದ ಸ್ನೇಹದ ಮತ್ತು ತ್ಯಾಗದ ಬಗ್ಗೆ ಈ ಲೇಖನ.

ಶ್ರೀ ಸುಬ್ರಹ್ಮಣ್ಯ ಶರ್ಮ ಕೆನರಾ ಬ್ಯಾಂಕಿನಲ್ಲಿ ಚಿಕ್ಕಮಗಳೂರು ಶಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ, ಅವರ ಮಗ ಶ್ರೀ ಭರತಶರ್ಮ ಚಿಕ್ಕಮಗಳೂರಿನಲ್ಲಿ 12ನೇ ತರಗತಿಯಲ್ಲಿದ್ದಾಗ ಹಾಗೂ ಸಿ.ಇ.ಟಿ. ಪರೀಕ್ಷೆಗೆ ತಯಾರಿ ನಡೆಸುತ್ತಿದ್ದಾಗ, ಇವನಿಗೆ ಅಶ್ವಿನ್ ಕಾರ್ತಿಕ್ ಎಂಬ ವಿದ್ಯಾರ್ಥಿಯೊಡನೆ ಪರಿಚಯವಾಯಿತು. ಅಶ್ವಿನ್ ಕಾರ್ತಿಕ್ ಕೈ ಕಾಲುಗಳಿಗೆ ಪಾರ್ಶ್ವವಾಯು ತಗಲಿದವ ಅಂಗವಿಕಲ ಹಾಗೂ ಮಿದುಳಿಗೆ ತ್ರಾಸಕೊಡುವ ಕಾಯಿಲೆಯಿಂದ ಬಳಲುತ್ತಿದ್ದ. ಭರತ್ ಶರ್ಮನಿಗೆ ತನ್ನ ಸ್ನೇಹಿತ, ಕಾರ್ತಿಕ್‌ಗೆ ಅಂಗವಿಕಲತೆ ಇದ್ದಾಗ್ಯೂ ಅವನ ಜೀವನೋತ್ಸಾಹ, ವಿದ್ಯಾಭ್ಯಾಸ ಮುಂದುವರಿಸಿ ಏನನ್ನಾದರೂ ಸಾಧಿಸಬೇಕೆಂಬ ಛಲವನ್ನು ನೋಡಿ, ತನ್ನ ಮಿತ್ರನಿಗೆ ಬೆಂಬಲವಾಗಿರಲು ನಿರ್ಧರಿಸಿದನು. ಮಿತ್ರನ ವಿದ್ಯಾಭ್ಯಾಸವನ್ನು ಮುಂದುವರೆಸಿ ಇಂಜಿನಿಯರ್ ಮಾಡಲು ತಾನು ತನ್ನ ನಾಲ್ಕು ವರ್ಷಗಳ ವಿದ್ಯಾಭ್ಯಾಸವನ್ನು ತ್ಯಾಗಮಾಡಿ, ಎಲ್ಲ ಕೆಲಸಗಳಲ್ಲೂ ಅವನಿಗೆ ದೈಹಿಕ, ಮಾನಸಿಕವಾಗಿ ಸಹಾಯ ಮಾಡುತ್ತಿದ್ದನು. ಕಾರ್ತಿಕ್ ಒಂದನೇ ವರ್ಷದ ಇಂಜಿನಿಯರಿಂಗ್ ಪರೀಕ್ಷೆ ಬರೆಯಲು, ತನ್ನ ಅಂಗವಿಕಲತೆಯಿಂದ ಬರೆಯುವ ಶಕ್ತಿ ಕಳೆದುಕೊಂಡಿರುವಾಗ, ಭರತ್ ಅವನಿಗೆ ಬರಹನಾಗಿ ಸಹಾಯ ಮಾಡಲು ನಿರ್ಧರಿಸಿದನು.

ವಿಶ್ವವಿದ್ಯಾಲಯದ ಕಾನೂನಿನಂತೆ, ಅಂಗವಿಕಲ ವಿದ್ಯಾರ್ಥಿಗಳ ಬರಹಗಾರರು 12ನೇ ತರಗತಿ ಅಥವಾ ಅದಕ್ಕೆ ಕಡಿಮೆ ತರಗತಿಗಳ ಉತ್ತೀರ್ಣ ರಾಗಿರಬೇಕಿತ್ತು. ಈ ಸಂದರ್ಭದಲ್ಲಿ ಭರತ್ 12ನೇ ತರಗತಿ ಪರೀಕ್ಷೆ ಮುಗಿಸಿ, ಇಂಜಿನಿಯರಿಂಗ್ ಸೇರಲು ಸಿ.ಇ.ಟಿ. ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದ. ತನ್ನ ಮುಂದಿನ ವಿದ್ಯಾಭ್ಯಾಸ, ಜೀವನ ರೂಪಿಸಿಕೊಳ್ಳಬೇಕಾದ ಮುಖ್ಯಘಟ್ಟದಲ್ಲಿ, ತನ್ನ ಸ್ನೇಹಿತ ಕಾರ್ತಿಕ್‌ನ ಕನಸನ್ನು ನನಸಾಗಿಸಲು, ತನ್ನ ಕನಸುಗಳನ್ನು ಬದಿಗೊತ್ತಿ, ತನ್ನ ತಂದೆ ತಾಯಿಗಳ ಏಕೈಕ ಪುತ್ರನಾಗಿದ್ದರೂ ಅವರ ಆಸೆ ಗಳನ್ನು ನಿರಾಶೆಗೊಳಿಸಿ, ತನ್ನ ಸ್ನೇಹಿತನ ಅಭ್ಯುದಯಕ್ಕಾಗಿ ಶ್ರಮಿಸಿದ್ದಾನೆ. ಭರತ್‌ನ ಪೋಷಕರು ತಮ್ಮ ಮಗ ತನ್ನ ಭವಿಷ್ಯನನ್ನು ಹಾಳುಮಾಡಿ ಕೊಂಡನೆಂದು ನೊಂದರು. ಆದರೆ ಭರತ್ ತನ್ನ ಸ್ನೇಹಿತನ ಇಂಜಿನಿಯರಿಂಗ್ ವಿದ್ಯಾಭ್ಯಾಸದ ಪೂರ್ಣ ಅವಧಿಯಲ್ಲಿ ಅವನ ಎಲ್ಲಾ ಪಾಠಕ್ರಮಗಳಲ್ಲಿ ಸ್ನೇಹಿತನಿಗೆ ಬರಹಗಾರನಾಗಿ, ಓದುಗನಾಗಿ, ಅವನ ಬೆನ್ನೆಲುಬಾಗಿ ನಿಂತು, ಸ್ನೇಹಿತನಲ್ಲಿ ಆತ್ಮವಿಶ್ವಾಸವನ್ನು ತುಂಬಿ ಕಾರ್ತಿಕ್ ಬಿ.ಇ. ಪರೀಕ್ಷೆಯಲ್ಲಿ ಶೇ.84 ಅಂಕಗಳನ್ನು ಗಳಿಸಿ ಉತ್ತೀರ್ಣನಾಗುವಂತೆ ಮಾಡಿರುತ್ತಾನೆ. ನಿಜವಾಗಲೂ ಸ್ನೇಹ ಮತ್ತು ತ್ಯಾಗಕ್ಕೆ ಇಂದಿನ ದಿನಗಳಲ್ಲಿ ಇದು ಉತ್ತಮ ನಿದರ್ಶನ.

ಅಶ್ವಿನ್ ಕಾರ್ತಿಕ್ ಬಿ.ಇ. ಮುಗಿಸಿದ ಮೇಲೆ ಬೆಂಗಳೂರಿನಲ್ಲಿ ಉದ್ಯೋಗಾವಕಾಶಕ್ಕಾಗಿ ಹಲವು ಕಂಪೆನಿಗಳಲ್ಲಿ ಸಂದರ್ಶನ ಎದುರಿಸಿದರೂ ಅಂಗವಿಕಲ ಎಂಬ ಕಾರಣಕ್ಕೆ ಕೆಲಸ ಸಿಗಲಿಲ್ಲ. ಕೊನೆಗೆ MPHASIS ಕಂಪನಿಯಲ್ಲಿ ಕೆಲಸ ದೊರೆತು, ಈ ಸಂದರ್ಭದಲ್ಲಿಯೂ ಭರತ್ ತನ್ನ ಸ್ನೇಹಿತನಲ್ಲಿ ಆತ್ಮವಿಶ್ವಾಸ ತುಂಬಿ ಅವನಿಗೆ ಸಹಾಯ ಮಾಡಿದ್ದಾನೆ. ಅಶ್ವಿನ್ ಕಾರ್ತಿಕ್ ಇಂತಹ ಅಂಗವಿಕಲತೆಯಿದ್ದೂ ಬಿ.ಇ. ಗಳಿಸಿರುವವರಲ್ಲಿ ಭಾರತದಲ್ಲೇ ಮೊದಲನೇ ವ್ಯಕ್ತಿ.

ಅಶ್ವಿನ್ ಮಾತಿನಲ್ಲೇ ಹೇಳುವುದಾದರೆ "ನನ್ನ ಕನಸುಗಳನ್ನು ಸಾಕಾರ ಗೊಳಿಸಲು ನನ್ನ ತಾಯಿ ಮತ್ತು ಭರತ್ ನನ್ನಲ್ಲಿ ತುಂಬಿದ ವಿಶ್ವಾಸ, ನನ್ನ ಎಲ್ಲಾ ಕೆಲಸ ಕಾರ್ಯಗಳಲ್ಲಿ ನೀಡುತ್ತಿದ್ದ ಸಹಕಾರ ಮತ್ತು ಒತ್ತಾಸೆಯೇ ಕಾರಣ. ಭರತ್ ನನ್ನ ಜೀವನದ ಅವಿಭಾಜ್ಯ ಅಂಗ. ಈ ಕಾಲದಲ್ಲಿ ತನ್ನ 4 ವರ್ಷ ವ್ಯಾಸಂಗವನ್ನು ತ್ಯಾಗಮಾಡಿ, ನನ್ನ ಜೊತೆ ಜೊತೆಗೆ ಎಲ್ಲಾ ದಿನಚರಿ ಕಾರ್ಯಗಳಲ್ಲಿ ನನಗೆ ಸಹಕಾರ ನೀಡಿ, ನನ್ನ ಕನಸನ್ನು ನನಸು ಮಾಡಲು ಶ್ರಮಿಸಿ, ಎಷ್ಟೋ ರಾತ್ರಿಗಳು ನಿದ್ದೆಗೆಟ್ಟು ನನ್ನ ಮನಸ್ಸಿನಲ್ಲಿದ್ದಂತೆ ನನ್ನ ಇಂಜಿನಿಯರಿಂಗ್ ಕೆಲಸಗಳಿಗೆ ಸಹಾಯ ಮಾಡಿಕೊಟ್ಟಿದ್ದಾನೆ.

ಈಗ ಭರತ್‌ಶರ್ಮ, ತಾನು ಅಪೂರ್ಣಗೊಳಿಸಿದ್ದ ವಿದ್ಯಾಭ್ಯಾಸವನ್ನು ತನ್ನ ಸ್ನೇಹಿತ ಕಾರ್ತಿಕ್‌ನ ಬೆಂಬಲದಿಂದ ಮುಂದುವರೆಸಿ ಇಂಜಿನಿಯರಿಂಗ್ ಪದವಿಗಳಿಸಿ, ಹೆಚ್.ಪಿ. ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾನೆ. ಭರತ್ ತನ್ನ ತಂದೆ ತಾಯಿಗಳ ಆಸೆಯನ್ನು ಪೂರ್ಣಗೊಳಿಸಿ ವೈವಾಹಿಕ ಜೀವನವನ್ನು ನಡೆಸುತ್ತಿದ್ದಾನೆ. ಈತನ ಸಾಧನೆಗೆ Cricket Legend Sachin Tendulkar ಮೆಚ್ಚುಗೆ ವ್ಯಕ್ತಗೊಳಿಸಿ ಭರತ್‌ನ ಜನ್ಮದಿನದ ಸಂದರ್ಭಗಳಲ್ಲಿ ಪ್ರತಿ ವರ್ಷವೂ ಶುಭಾಶಯ ಕಳುಹಿಸುತ್ತಾರೆ.

ಭರತ್‌ನ ಸಾಧನೆಗೆ ಬ್ರಿಗೇಡ್ ಗ್ರೂಪ್‌ನವರು `Young Achivement Award `**Friend in a Million**' ಪ್ರಶಸ್ತಿ ನೀಡಿದ್ದಾರೆ.

ಭರತ್‌ಶರ್ಮ ನಮ್ಮ ಬೃಹಚ್ಚರಣಕ್ಕೆ ಸೇರಿದವನೆಂದು ಹೇಳಲು ಬಹಳ ಹೆಮ್ಮೆಯಾಗುತ್ತದೆ. ಮಾನವೀಯ ಮೌಲ್ಯಗಳು ಕಸಿಯುತ್ತಿರುವ ಈ ಕಾಲದಲ್ಲಿ ಇಂತಹ ವ್ಯಕ್ತಿಗಳ ಬಹಳ ವಿರಳ. ಸ್ನೇಹ ಮತ್ತು ತ್ಯಾಗಕ್ಕೆ ಒಳ್ಳೆಯ ನಿದರ್ಶನವಾಗಿದ್ದಾನೆ. ಈತನ ಜೀವನ ಎಲ್ಲಾ ಯುವಕರಿಗೆ ಒಂದು ಮಾದರಿಯಾಗಲಿ. ಇವರ ಮತ್ತು ಇವರ ಕುಟುಂಬ ವರ್ಗಕ್ಕೆ ಆ ಪರಮಾತ್ಮನು ಒಳ್ಳೆಯ ಭವಿಷ್ಯ ಜೀವನ ನೀಡಲಿ ಎಂದು ಪ್ರಾರ್ಥಿಸುವೆ.

ವೆಂಕಟಸುಬ್ಬರಾವ್ (ನಟರಾಜ್)



| ಸಂಘಕ್ಕೆ ಹೊಸ ಸದಸ್ಯರು | ಹೊಸ ಪೋಷಕರು |
|---|---|
| ಶ್ರೀಯುತ ನಾಗರತ್ನ (M–436) | ಶ್ರೀಮತಿ ಕೆ.ಎಲ್. ಶಾಂತಾ ಸುಬ್ರಮ್ಮಣ್ಯ (P–070) |
| ಸರಸ್ವತಿ ನಟರಾಜನ್ (M–437) | ಶ್ರೀ ಟಿ.ವಿ.ಎಸ್. ಶರ್ಮ (P–080) |
| ಬಿ.ಆರ್. ರಮೇಶ್ (M–439) | ಶ್ರೀ ಎಸ್.ಎ. ಸತ್ಯಮೂರ್ತಿ (P–081) |
| ಗಾಯತ್ರಿ ವಾಸುದೇವನ್ (M–440) | |
| ಶ್ರೀಹರಿ ಎನ್.ಎಸ್. (M–441) | |
| ಮಲ್ಲಿಕಾ ರವಿಶಂಕರ್ (M–442) | |
| ಜೆ.ಎಸ್. ಇಂದಿರಾ (M–443) | |
| ಮಮತಾ ಶಿವಕುಮಾರ್ (M–456) | |

## ಓದುಗರ ಪತ್ರಗಳು



ಮಾನ್ಯ ಸಂಪಾದಕರೇ,

ನನ್ನ ಹುಟ್ಟು ಹಬ್ಬದ ಶುಭಾಶಯ ತಿಳಿಸಿ, ಪತ್ರಿಕೆ ಹಾಗೂ ಶ್ರೀ ಶ್ರೀನಿವಾಸ ಕಲ್ಯಾಣ ಮಹೋತ್ಸವದ ಆಹ್ವಾನ ಪತ್ರಿಕೆ ಕಳುಹಿಸಿದ್ದಕ್ಕೆ ವಂದನೆಗಳು. ಭಾನುವಾರ ನಡೆದ ಮಹೋತ್ಸವದಲ್ಲಿ ಪಾಲ್ಗೊಂಡಿದ್ದೆ. ಪೂಜಾ ಕಾರ್ಯಕ್ರಮಗಳು ನಿರೂಪಣೆ ಆದಿಯಾಗಿ ಎಲ್ಲವೂ ವ್ಯವಸ್ಥಿತವಾಗಿ ನಡೆಯಿತು. ಇನ್ನು ಪ್ರಸಾದ (ಊಟ) ಬಡಿಸುವ ಸೇವೆಯಲ್ಲಿ ನಮ್ಮ ಯುವ ಬಾಂಧವರು ಹೆಚ್ಚಿನ ರೀತಿಯಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದು ಸಂತಸದ ವಿಷಯ. ಸದಸ್ಯ ಬಂಧುಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮನವಿ, ತನ್ಮೂಲಕ ಸಂಘದ ಕಾರ್ಯಕ್ರಮಗಳಲ್ಲಿ ಉತ್ಸಾಹ ಹೆಚ್ಚಿರುತ್ತದೆ. ಪ್ರೋತ್ಸಾಹಿಸಿದಂತೆಯೂ ಆಗುತ್ತದೆ.

ಕಳೆದ ಜುಲೈ–ಅಕ್ಟೋಬರ್ ಸಂಚಿಕೆಯಲ್ಲಿ ಪ್ರವಾಸದ ವರದಿ, ಚಿತ್ರಗಳು, ಕಗ್ಗದ ಬಗೆಗಿನ ಲೇಖನ ನೆನಪಿನಾಳದ ಭಾವಚಿತ್ರಗಳು, ಇವನ್ನು ನೋಡಿದಾಗಲಂತೂ ನಮ್ಮ ಪರಿಚಯದ ಅನೇಕರ ಚಿತ್ರ ಇದ್ದು ನೆನಪಿಗೆ ಬಂದು ಮುದ ನೀಡುತ್ತದೆ. ಕೆಲ ಅಪರೂಪದ ಚಿತ್ರಗಳು ಸಂಗ್ರಹ ಯೋಗ್ಯಸಹ.

ಪೂಜ್ಯ ಡಿ.ವಿ.ಜಿ.ಯವರ ಕಗ್ಗದ ಜೊತೆಗೇ ಬೇರೆಯಾಗಿಯೇ ಅವರ ಪ್ರಸಿದ್ಧ ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗದ ಕೆಲ ಭಾಗಗಳು ಪತ್ರಿಕೆಯಲ್ಲಿ ಬಂದರೆ ಎಲ್ಲರಿಗೂ ಮನನ ಮಾಡಲು ಉಪಯುಕ್ತ.

ಮತ್ತೊಮ್ಮೆ ವ್ಯವಸ್ಥಿತವಾಗಿ ಮೇಲ್ಕಂಡ ಕಾರ್ಯಕ್ರಮ ಆಗು ಮಾಡಿಸಿದ ಅಧ್ಯಕ್ಷರಿಗೆ, ಸಮಿತಿಯ ಎಲ್ಲ ಸದಸ್ಯರು ಯುವಕಾರ್ಯಕರ್ತರಿಗೆ, ಬಂಧುಗಳಿಗೆ ವಂದನೆಗಳು.

ಇಂತಿ

■ **ಶ್ಯಾವಕಹಳ್ಳಿ ನಂ. ಕೃಷ್ಣಮೂರ್ತಿ**
ಅರಸಿನಕುಂಟೆ, ನೆಲಮಂಗಲ

★ ★

ಅಧ್ಯಕ್ಷರೇ ನಮಸ್ಕಾರಗಳು

ತಾವೂ, ತಮ್ಮ ಕಾರ್ಯಕಾರಿ ಸಮಿತಿಯು ಅತ್ಯಂತ ಉತ್ತಮ ಕೆಲಸಗಳನ್ನು ಸಮುದಾಯಕ್ಕೆ ಮಾಡುತ್ತಿರುವುದಕ್ಕೆ ಅಭಿನಂದನೆಗಳು. ನನಗೀಗ ಎಂಬತ್ತು ವರ್ಷ ಆರ್ಥಿಕವಾಗಿ ನಾನೇನು ಸ್ಥಿತಿವಂತನಲ್ಲ ಆದರೂ ತಮ್ಮ ಮನವಿಗೆ ಸ್ಪಂದಿಸಿ, ಸಂಘದ ವಾರ್ಷಿಕ ನಿರ್ವಹಣೆಗಾಗಿ 250/– ರೂ. ಗಳನ್ನು ಹಾಗೂ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವಕ್ಕೆ 1000/– ರೂ.ಗಳನ್ನು ಕೊಡುತ್ತಿದ್ದೇನೆ. ನಮ್ಮ ಬಂಧುಗಳು ಆರ್ಥಿಕವಾಗಿ ಅತ್ಯಂತ ಅನುಕೂಲವಾಗಿದ್ದರೂ ಹಾಗೂ ಅವರ ಮಕ್ಕಳು ಹೆಚ್ಚಿನ ಸ್ಥಿತಿವಂತರಾಗಿದ್ದರೂ, ಸಂಘಕ್ಕೆ ಕೇವಲ ವಾರ್ಷಿಕ 250/– ರೂ.ಗಳನ್ನು ಎಲ್ಲರೂ ಕೊಟ್ಟಿಲ್ಲವೆಂದು ತಿಳಿದು ನನ್ನ ಮನಸ್ಸಿಗೆ ವೇದನೆಯಾಗಿದೆ. ನಾನೂ ಕೂಡ ನಿಮ್ಮೊಂದಿಗೆ ಸಮುದಾಯದ ಎಲ್ಲಾ ವೇತನದಾರರೂ ಸಂಘಕ್ಕೆ ಸದಸ್ಯರಾಗಿ ಪೋಷಕರಾಗಿ, ದಾನಿಗಳಾಗಿ, ಪ್ರಾಯೋಜಕರಾಗಿ ಸಮುದಾಯದ ಒಗ್ಗೂಡಿಕೆಗಾಗಿ ಶ್ರಮಿಸುತ್ತಿರುವ ಸಂಘಕ್ಕೆ ಆರ್ಥಿಕ ಬಲ ನೀಡುವರೆಂದು ಆಶಿಸುತ್ತೇನೆ.

ನಿಮ್ಮ ವಿಶ್ವಾಸಿ

■ **ಹೆಚ್.ಪಿ. ರಾಮಕೃಷ್ಣ**

*If un Delivered please return to :*
*President*
**'Brihacharana Sangha'** No. 8, 3rd Cross, Annaiyyappa Block,
Kumarapark West, Bengaluru-560 020.

## ವಾರ್ತಾ ಚಿತ್ರಗಳು



ಸಂಘದ ಸದಸ್ಯ ಶ್ರೀ ತಟ್ಟನಹಳ್ಳಿ ಮಣಿಯವರು ತಮ್ಮ ಕುಟುಂಬದೊಂದಿಗೆ ಬನ್ನೇರುಘಟ್ಟ ಚಂಪಕದಾಮ ಸ್ವಾಮಿ ಕಲ್ಯಾಣೋತ್ಸವ ಸಮಾರಂಭ



'ಬೃಹಚ್ಚರಣ' ಸಂಪಾದಕ ಶ್ರೀ ಕೆ.ಸಿ. ನಟರಾಜ್‌ಅವರಿಗೆ 70ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳಿಂದ ಶುಭ ಹಾರೈಕೆ



ಕಲ್ಯಾಣೋತ್ಸವದಲ್ಲಿ ಪಾಲ್ಗೊಂಡ ಸಂಘದ ಕಾರ್ಯಕರ್ತರು

Book-Post

To,

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana**, No. 36, 40Ft. Road, Raghavanagar, NTY Layout, Bengaluru-560 026. E-mail: ilaprinters@gmail.com